ಶ್ರೀ

ಶ್ರೀಮತೇ ರಾಮಾನುಜಾಯನಮಃ

# ಪರತತ್ತ್ವ

ಶ್ರೀಮಾನ್ ಎಂ. ಓ. ಎಸ್. ಐಯ್ಯಂಗಾರ್, ಬಿ ಇ, ಎಂ ಐ. ಇ.,
ರಿಟೈರ್ಡ್ ರೈಲ್ವೇ ಡೆಪ್ಯೂಟಿ ಛೀಫ್ ಇಂಜಿನಿಯರಿಂದ
ಬರೆಯಲ್ಪಟ್ಟದ್ದು

ಉಭಯವೇದಾನ್ತ ಪ್ರವರ್ತನ ಸಭೆಯವರಿಂದ
ಪ್ರಕಟಿಸಲ್ಪಟ್ಟದ್ದು.

ಮಲ್ಲೇಶ್ವರಂ, ಬೆಂಗಳೂರು.

1964

ಮೊದಲ ಮುದ್ರಣ 1964

ಮುದ್ರಣ :

ದವಲತ್ ಪ್ರಿಂಟರ್ಸ್
ಮಲ್ಲೇಶ್ವರಂ, ಬೆಂಗಳೂರು-೩.

# ಪ್ರಕಟನೆ.

ಉಭಯವೇದಾನ್ತ ಪ್ರವರ್ತನಸಭೆಯು ಸುಮಾರು 60 ವರ್ಷಗಳಿಂದ ಅವಿಚ್ಛಿನ್ನವಾಗಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಉಪನ್ಯಾಸಗಳ ಮೂಲಕವೂ, ವೇದ ಮತ್ತು ಸಂಸ್ಕೃತ ದ್ರಾವಿಡರೂಪವಾದ ಉಭಯವೇದಾನ್ತಗಳಲ್ಲಿ ಪರೀಕ್ಷೆಗಳನ್ನು ನಡೆಯಿಸಿ ಬಹುಮಾನಗಳನ್ನು ಕೊಡುವುದರ ಮೂಲಕವೂ ಪ್ರಚಾರ ಮಾಡುತ್ತಿರುವುದು ಎಲ್ಲರಿಗೂ ತಿಳಿದವಿಷಯುವೇ ಆಗಿದೆ ಪುಸ್ತಕ ಭಂಡಾರವನ್ನು ಏರ್ಪಡಿಸಲಾಗಿದೆ ಮತ್ತು ವಿದ್ಯಾರ್ಥಿಗಳಿಗಾಗಿ ಪಾಠಶಾಲೆಯುನ್ನು ನಡೆಯಿಸಲಾಗಿದೆ.

ಇದರ ಜತೆಗೆ ಸಭೆಯು ಉದ್ದೇಶಗಳಲ್ಲೊಂದಾದ ಲೇಖನ ಪ್ರಕಟನ ಕಾರ್ಯವನ್ನು ಇದೀಗ ಪ್ರಾರಂಭ ಮಾಡಲಾಗಿದೆ ಲೇಖನಗಳು ಒದಗಿ ಸೌಕರ್ಯಗಳು ಏರ್ಪಟ್ಟರೆ ತ್ರೈಮಾಸಿಕ ಅಥವಾ ಮಾಸಿಕ ಪತ್ರಿಕೆಯನ್ನು ಆರಂಭಿಸಲು ಉದ್ದೇಶ್ಯವಿದೆ ಪ್ರಕಟನ ಕಾರ್ಯವು ಚಿಕ್ಕ ಚಿಕ್ಕ ಲೇಖನಗಳನ್ನು ಪ್ರಕಟಿಸುವ ಕಾರ್ಯದಿಂದ ಆರಂಭವಾಗಿದೆ ಭಗವದ್ಭಾಷ್ಯಕಾರರ ತಿರುನಕ್ಷತ್ರದಂದು ಇದನ್ನು ಪ್ರಚುರಗೊಳಿಸಲು ಸಂತೋಷವಾಗುತ್ತಿದೆ. ಶ್ರೀಮಾನ್ ರಿಟೈರ್ಡ್ ಡೆಪ್ಯುಟಿ ಛೀಫ್ ಇಂಜನಿಯರ್, ಸದರ್ನ್ ರೈಲ್ವೆ ಎಂ. ಓ ಎಸ್ ಅಯ್ಯಂಗಾರ್ಯರು ತಮ್ಮ ಲೇಖನವನ್ನು ಸಭೆಗೆ ಕೊಟ್ಟು ಉಪಕರಿಸಿರುತ್ತಾರೆ "ಪರತತ್ತ್ವ" ವೆಂಬ ಈ ಲೇಖನವು ಇನ್ನೂ ಕೆಲವಂಶಗಳಿಂದ ಕೂಡಿರಬೇಕಾಗಿದ್ದರೂ ಲೇಖನವು ವಿಸ್ತಾರವಾದೀತೆಂದು ಸಂಗ್ರಹಿಸಲಾಗಿದೆ ಇದೇ ರೀತಿ ಆಗಾಗ್ಗೆ ಸರಳವಾದ ಮತ್ತು ವಿದ್ವತ್ಪೂರ್ಣವಾದ ಲೇಖನಗಳನ್ನು ಚಿಕ್ಕ ಪುಸ್ತಕಗಳಾಗಿ ಪ್ರಕಟಿಸಿ ಜ್ಞಾನಪ್ರಸಾರ ಕಾರ್ಯವನ್ನು ಮುಂದುವರಿಸಲು ಸಭೆಯು ಆಶಿಸುತ್ತದೆ.

ವಿದ್ವಾಂಸರುಗಳು ತಮ್ಮ ವಿರಾಮ ಕಾಲಗಳಲ್ಲಿ ಈ ವಿಧವಾದ ಗ್ರಂಥಗಳನ್ನು ಬರೆದು ಸಭೆಯ ಪ್ರಕಟನಕಾರ್ಯದಲ್ಲಿ ನೆರವಾಗಬೇಕೆಂದು ಪ್ರಾರ್ಥಿಸುತ್ತೇವೆ ಶ್ರೀಮದಾಚಾರ್ಯವರ್ಯರ ನಿರ್ಹೇತುಕ ಕೃಪಾಕಟಾಕ್ಷದಿಂದ ನಮ್ಮ ಉದ್ದೇಶವು ಶಾಶ್ವತವಾಗಿ ಬೆಳೆಯಲೆಂದು ಪ್ರಾರ್ಥಿಸುತ್ತೇವೆ.

ಶ್ರೀ ರಾಮಾನುಜಾರ್ಯ ದಿವ್ಯಾಜ್ಞಾ ವರ್ಧತಾಂ ಅಭಿವರ್ಧತಾಂ

ಇತಿ,

**ಪಂಡಿತ ಭೂಷಣಂ ಆರ್. ಎ. ಕೃಷ್ಣಮಾಚಾರ್ಯ,**

**ನು. ಸೋ. ಶ್ರೀನಿವಾಸ ಗೋಪಾಲಾಚಾರ್ಯ,**

ಸಭಾಪಂಡಿತರುಗಳು.

26—3—64

ಮಲ್ಲೇಶ್ವರಂ.

# ಮುನ್ನುಡಿ

ಇದೆಲ್ಲವನ್ನೂ ಓದಿನೋಡಿದೆ ಬಹಳ ಸಮಂಜಸವಾಗಿದೆ. ಈ ಪರತತ್ತ್ವ ವಿಚಾರಕ್ಕೆ ಸಂಬಂಧಪಡದೆ ಅನ್ಯಪರವಾಗಿರುವ ಜ್ಯೋತಿಶಾಸ್ತ್ರದ ವಚನಗಳನ್ನೆತ್ತಿ ತೋರಿಸಿರುವುದು ಪ್ರಬಲ ಪ್ರಮಾಣಗಳು ಶಂಕರಾಚಾರ್ಯರಿಗೂ ನಾರಾಯಣನೇ ಪರತತ್ತ್ವವೆಂಬುವುದರಲ್ಲೇ ಅಭಿಪ್ರಾಯವೆಂಬುದನ್ನು ತೋರಿಸಿರುವುದೂ ಸಮಂಜಸ ವಾಗಿದೆ

ಸಾಹಿತ್ಯರತ್ನಂ ಆಸ್ಥಾನ ಮಹಾವಿದ್ವಾನ್
**ಜಗ್ಗು ವೆಂಕಟಾಚಾರ್ಯ**
ಸಾಹಿತ್ಯಾಲಂಕಾರ ಸಾಂಖ್ಯವೇದಾಂತ ವಿದ್ವಾನ್
ಸಾಂಖ್ಯ ತೀರ್ಥ ಶಾಸ್ತ್ರಕವಿರತ್ನಂ

೨೯-೧೧-೫೭
ಮೇಲ್ಕೋಟೆ.

# ವಿಜ್ಞಾಪನೆ

ವಿಶಿಷ್ಟಾದ್ವೈತ ಸಿದ್ಧಾಂತರೀತ್ಯಾ ಶ್ರೀಮನ್ನಾರಾಯಣನೇ ಪರತತ್ತ್ವವು ಈ ಪರತತ್ತ್ವ ನಿರ್ಣಯದಲ್ಲಿ ನಮ್ಮ ಪೂರ್ವಿಕರಾದ ಆಳ್ವಾರಾಚಾರ್ಯರುಗಳು ಹೇಳಿರುವ ವಿಷಯಗಳು ಅಗಾಧವಾದ ಮಹಾಸಮುದ್ರದಂತೆ ಅತಿ ವಿಸ್ತಾರವಾಗಿರುವುದು ಈ ಸಣ್ಣ ಪುಸ್ತಕದಲ್ಲಿ ಆ ಮಹಾಸಮುದ್ರದ ಒಂದು ಬಿಂದುವನ್ನು ಮಾತ್ರ ಕಾಣಿಸಬಹುದು ಸಾಮಾನ್ಯವಾಗಿ ಸಮಸ್ತಮತಸ್ಥರಿಂದಲೂ ಪರಿಗ್ರಹಿಸಲ್ಪಟ್ಟಿರುವ ಕೆಲವು ಶಾಸ್ತ್ರಗಳಲ್ಲಿರುವ ವಿಷಯಗಳನ್ನು ಮಾತ್ರ ಎತ್ತಿತೋರಿಸಿ ಇಲ್ಲಿ ಈ ವಿಷಯವನ್ನು ಓದುವವರ ಅವಗಾಹನಕ್ಕೆ ತರಲು ಪ್ರಯತ್ನಿಸಿದೆ ನಮ್ಮ ಪೂರ್ವಾಚಾರ್ಯರುಗಳು ಹೇಳಿರುವ ವಿಷಯಗಳೂ ಅಲ್ಪಸ್ವಲ್ಪ ಅವಗಾಹನಕ್ಕೆ ತರಲ್ಪಟ್ಟಿವೆ ಶ್ರೀರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟುವಾಗ ಒಂದು ಅಳಿಲು ತನ್ನ ಕಾಲಿನಿಂದ ಸ್ವಲ್ಪ ಮರಳನ್ನು ತಂದುಹಾಕಿ ನಾನೂ ಸೇತುವೆಯನ್ನು ಕಟ್ಟಿದೆನು ಎಂದು ಹೇಳಿದಂತಿದೆ ಈ ದಾಸನ ಪ್ರಯತ್ನ. ಈ ಸಣ್ಣಪುಸ್ತಕವು ನನ್ನಂಥಾ ಅಲ್ಪಜ್ಞರ ಅವಗಾಹನಕ್ಕಾಗಿ ಬರೆಯಲ್ಪಟ್ಟಿದೆ. ವಿಶೇಷಜ್ಞರು ಇದರಲ್ಲಿರುವ ತಪ್ಪುಗಳನ್ನು ಮನ್ನಿಸುವಂತೆ ಪ್ರಾರ್ಥಿಸುತ್ತೇನೆ.

ಉಭಯವೇದಾನ್ತ ಪ್ರವರ್ತನ ಸಭೆಯವರು ಇದನ್ನು ಪ್ರಚಾರಮಾಡಿದುದಕ್ಕಾಗಿ ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಎಂ. ಓ. ಶ್ರೀನಿವಾಸ ದಾಸರ್.

ಶ್ರೀ

# ಪ ರ ತ ತ್ತ್ವ

---

**ಪೀಠಿಕೆ :** ಭಗವದ್ಭಕ್ತರಾದ ನಾವೆಲ್ಲರೂ ಶ್ರೀಮನ್ನಾರಾಯಣನನ್ನೇ ಪರಬ್ರಹ್ಮ ಸ್ವರೂಪನನ್ನಾಗಿ ತಿಳಿದು ಉಪಾಸಿಸಿ ನಮ್ಮನಮ್ಮ ಪುರುಷಾರ್ಥಗಳನ್ನು ಪಡೆಯುವೆವು. ಶ್ರೀಮನ್ನಾರಾಯಣನಲ್ಲಿ ನಮಗೆ ಸ್ಥಿರವಾಗಿರುವ ಈ ಪರತ್ವಭಾವನೆಯು ಸಂಪ್ರದಾಯ ಪರಂಪರೆಯಿಂದ ಬಂದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ವಿಷಯದಲ್ಲಿ ಆಸ್ತಿಕರಾದ ಅನೇಕರಿಗೆ ಯಾವವಿಧವಾದ ಸಂಶಯವೂ ಉಂಟಾಗಿಲ್ಲ. ಅದೂ ಅಲ್ಲದೆ ಅವರಿಗೆ ಶ್ರೀಮನ್ನಾರಾಯಣನಲ್ಲಿ ದೃಢವಾದ ನಂಬಿಕೆಯೂ ಅಚಲವಾದ ಭಕ್ತಿಯೂ ಅವರವರ ಶಕ್ತ್ಯನುಸಾರವಾಗಿ ಅಭಿವೃದ್ಧಿಯಾಗುತ್ತಿದೆಯೇವಿನ ಕಡಿಮೆಯಾಗಿಲ್ಲ ಆದರೆ ಪಾಶ್ಚಾತ್ಯರ ಸಹವಾಸದಲ್ಲಿ ವಿಶೇಷವಾಗಿ ಓಡಾಡುತ್ತಿರುವವರಲ್ಲಿ ಕೆಲವರಿಗೆ ಅನೇಕ ಸಂಶಯಾಸ್ಪದಗಳಾದ ವಿಚಾರಗಳು ಆಗಾಗ್ಗೆ ತೋರುತ್ತಿರುತ್ತವೆ. ವೇದಾನ್ತಾದಿ ಶಾಸ್ತ್ರಗಳನ್ನು ಪ್ರಮಾಣವಾಗಿ ಅಂಗೀಕರಿಸುವ ಮತಗಳಲ್ಲಿಯೇ ಗುಣಪೂರ್ಣನಾದ ದೇವರೊಬ್ಬನಿರುವನೆಂದೂ, ನಿರ್ಗುಣನಾಗಿ ಆಕಾರಾದಿಗಳಿಲ್ಲದೆ ಚೈತನ್ಯಮಾತ್ರಸ್ವರೂಪನಾದ ಪರಮಾತ್ಮನೊಬ್ಬನೇ ಇರುವನೆಂದೂ, ಸಕಲಾತ್ಮರುಗಳೂ ಆ ಪರಮಾತ್ಮನ ಸ್ವರೂಪಿಗಳೇ ಎಂದೂ, ಪೃಥಿವಿ, ಅಪ್ಪು, ತೇಜಸ್ಸು ವಾಯು, ಆಕಾಶಗಳೆಂಬ ಪಂಚಭೂತಗಳ ಸಂಯೋಗದಿಂದ ಚೈತನ್ಯವೊಂದು ಉತ್ಪತ್ತಿಯಾಗುವುದೆಂದೂ ಈ ರೀತಿಯಾಗಿ ಸಿದ್ಧಾನ್ತಗಳು ಹಲವುಬಗೆಯಾಗಿವೆ. ವೇದಬಾಹ್ಯಮತಗಳಲ್ಲಿ ಅನೇಕರು ದೇವರೊಬ್ಬನಿರುವನೆಂದು ನಂಬುವುದೇ ಇಲ್ಲ.

**ಪ್ರಮಾಣಗಳು :** ಸಾಮಾನ್ಯವಾಗಿ ಯಾವ ಸಿದ್ಧಾನ್ತವೂ ಪ್ರಮಾಣಗಳಿಲ್ಲದೆ ಸ್ಥಿರಪಡುವುದಿಲ್ಲ ಒಂದು ಸಿದ್ಧಾನ್ತದವರು ಪ್ರತ್ಯಕ್ಷವಾಗಿ ನಮ್ಮ ಇಂದ್ರಿಯಗಳಿಗೆ ಗೋಚರಿಸುವುದನ್ನು ಮಾತ್ರವೇ ಪ್ರಮಾಣವನ್ನಾಗಿ ಅಂಗೀಕರಿಸಿ ಆ ಪ್ರಮಾಣಕ್ಕೆ ಹೊರಗಿರುವ ವಿಷಯಗಳನ್ನೆಲ್ಲಾ ನಿರಾಕರಿಸುತ್ತಾರೆ ಮತ್ತೆ ಕೆಲವರು ಪ್ರತ್ಯಕ್ಷ ಪ್ರಮಾಣದೊಡನೆ ಅನುಮಾನ ಪ್ರಮಾಣವನ್ನೂ ಅಂಗೀಕರಿಸುತ್ತಾರೆ ಅನುಮಾನವೆಂದರೆ ತರ್ಕ (Logic) ಈ ಎರಡು ಪ್ರಮಾಣಗಳಲ್ಲದೆ "ಶಬ್ದ ಪ್ರಮಾಣ" ವೆಂಬ ಮೂರನೆಯ ಪ್ರಮಾಣವು ವೈದಿಕರೆಲ್ಲರಿಂದಲೂ ಅಂಗೀಕರಿಸಲ್ಪಟ್ಟಿದೆ ಶಬ್ದವೆಂದರೆ ಅಪೌರುಷೇಯವಾದ ವೇದ ಮತ್ತು ವೇದಾನ್ತಗಳು ಅಥವಾ ಉಪನಿಷತ್ತುಗಳು ನಮ್ಮ

ಇಹಪರ ಸೌಖ್ಯಗಳಿಗೂ ಧರ್ಮಾನುಷ್ಠಾನಗಳಿಗೂ ವೇದವೇದಾಂತ ಸ್ಮೃತೀತಿಹಾಸ ಪುರಾಣಾದಿಗಳು ಅವಶ್ಯಕಗಳೆಂದು ಪುರಾತನ ಮಹರ್ಷಿಗಳಿಂದಲೂ ಮತ್ತು ನಮ್ಮ ಪೂರ್ವಾಚಾರ್ಯರುಗಳಿಂದಲೂ ನಿಷ್ಕರಿಸಲ್ಪಟ್ಟಿವೆ

**ವೇದಭಾಗಗಳು :** ಶಬ್ದ ಪ್ರಮಾಣಗಳಿಗೆಲ್ಲಾ ಮೂಲವಾದ ವೇದವು ಎರಡು ಭಾಗವಾಗಿ ವಿಂಗಡಿಸಲ್ಪಟ್ಟಿದೆ ಇದರ ಪೂರ್ವಭಾಗವು ಕರ್ಮಕಾಂಡವೆಂದು ಕರೆಯಲ್ಪಟ್ಟು ಅದರಲ್ಲಿ ಭಗವದಾರಾಧನ ರೂಪವಾದ ಕರ್ಮಗಳ ವಿಚಾರವು ಹೇಳಲ್ಪಟ್ಟಿರುವುದು. ಉತ್ತರ ಭಾಗವಾದ ಬ್ರಹ್ಮಕಾಂಡ ವೆಂಬುವುದು ಸಕಲ ಜಗತ್ತಿಗೂ ಉತ್ಪತ್ತಿ, ಸ್ಥಿತಿ ಮತ್ತು ಲಯಕಾರಣನೂ, ಉಪಾಸ್ಯನೂ, ಮೋಕ್ಷಪ್ರದನೂ ಆದ ಪರಬ್ರಹ್ಮನ ಸ್ವರೂಪ ರೂಪ ವಿಭವೈಶ್ವರ್ಯಾದಿಗಳನ್ನು ವಿಶದೀಕರಿಸುತ್ತದೆ ನಮ್ಮ ಆಳ್ವಾರ್ರುಗಳು ಅವರವರ ಕಾಲದಲ್ಲಿ ಈ ಪರಮಾರ್ಥ ತತ್ವವನ್ನು ನಿರ್ಣಯಿಸಿ ಅವರವರ ಅನುಭವ ಪರೀವಾಹರೂಪವಾದ ದಿವ್ಯ ಪ್ರಭಂಧಗಳನ್ನು ನಮ್ಮ ಉಜ್ಜೀವನಕ್ಕಾಗಿ ಕರುಣಿಸಿರುತ್ತಾರೆ.

**ಪೆರಿಯಾಳ್ವಾರ್ರವರು ಪರತತ್ತ್ವವನ್ನು ಸ್ಥಾಪಿಸಿದ ವಿಷಯ :** ಈ ಪರತತ್ತ್ವ ನಿರ್ಣಯ ವಿಚಾರದಲ್ಲಿ ನಮ್ಮ ಗುರುಪರಂಪರಾ ಗ್ರನ್ಥದಲ್ಲಿರುವ ಪೆರಿಯಾಳ್ವಾರ್ರವರ ಜೀವನ ಚರಿತ್ರೆಯಲ್ಲಿ ಒಂದು ಸಣ್ಣ ಕಥೆಯಿದೆ ಪೆರಿಯಾಳ್ವಾರ್ರು ಕಲಿಯುಗಾರಂಭ ವಾದ ೪೭ನೇ ವರ್ಷದಲ್ಲಿ ಕ್ರೋಧಿಸಂವತ್ಸರದ ಜ್ಯೇಷ್ಠ ಶುದ್ಧ ಏಕಾದಶಿ ಸ್ವಾತೀನಕ್ಷತ್ರದ ಭಾನುವಾರದ ದಿವಸ ಶ್ರೀ ವಿಲ್ಲಿಪುತ್ತೂರೆಂಬ (South India) ಗ್ರಾಮದಲ್ಲಿ ಶ್ರೀಮನ್ನಾರಾಯಣನ ವಾಹನವಾದ ಗರುಡಾಂಶರಾಗಿ ಬ್ರಾಹ್ಮಣ ಕುಲದಲ್ಲಿ ಅವತರಿಸಿದರು ಪರಮ ಭಾಗವತೋತ್ತಮರಾದ ಇವರು ಆ ಊರಿನ ದೇವಸ್ಥಾನದಲ್ಲಿದ್ದ ವಟಪತ್ರಶಾಯಿ ದೇವರಲ್ಲಿ ನಿತ್ಯಕೈಂಕರ್ಯ ಪರರಾಗಿ ಒಂದು ಹೂವಿನ ತೋಟವನ್ನು ನಿರ್ಮಿಸಿ ಪ್ರತಿನಿತ್ಯವೂ ಆ ದೇವರಿಗೆ ಪುಷ್ಪಕೈಂಕರ್ಯವನ್ನು ನಡೆಸುತ್ತಿದ್ದರು

ಆ ಕಾಲದಲ್ಲಿ ಮಧುರೆಯ ಸಮೀಪದಲ್ಲಿರುವ ಕೂಡಲ್ ಎಂಬ ರಾಜಧಾನಿಯಲ್ಲಿ ಪಾಂಡ್ಯ ಕುಲರಾಜನಾದ ವಲ್ಲಭದೇವರಾಯನು ರಾಜ್ಯವನ್ನಾಳುತ್ತಿದ್ದನು ಒಂದಾನೊಂದುದಿವಸ ಅವನಿಗೆ ತಾನು ಪರತತ್ತ್ವಜ್ಞಾನವನ್ನು ಅರಿತು ಮೋಕ್ಷಮಾರ್ಗವನ್ನು ಅನುಸರಿಸಬೇಕೆಂದು ಆಸೆಹುಟ್ಟಿ ಅದಕ್ಕಾಗಿ ತನ್ನ ಗುರುವಿನ ಸಲಹೆಯ ಪ್ರಕಾರ ತನ್ನ ರಾಜ್ಯದಲ್ಲಿರುವ ವಿದ್ವಾಂಸರನ್ನೆಲ್ಲಾ ಕರೆಸಿ ಪರತತ್ತ್ವವಿಂಥದೆಂದು ನಿರ್ಧರಿಸಬೇಕೆಂಬ ಅಭಿಪ್ರಾಯದಿಂದ ತನ್ನ ರಾಜ್ಯದಲ್ಲೆಲ್ಲಾ ಡಂಗುರವನ್ನು ಹೊಡೆಯಿಸಿದನು. ಈ ವಾದದಲ್ಲಿ ಗೆದ್ದವರಿಗೆ ಬಹುಮಾನರೂಪವಾಗಿ ಬಹುಧನವನ್ನು ಒಂದು ಮೂಟೆಯನ್ನಾಗಿ ಕಟ್ಟಿ ರಾಜಾಸ್ಥಾನದಲ್ಲಿ ನೇತುಹಾಕಿ ಇಡಿಸಿದನು.

ಈಕಡೆ ವಟಪತ್ರಶಾಯಿ ದೇವರು ಮಹಾ ಭಾಗವತೋತ್ತಮರಾದ ಪೆರಿಯಾಳ್ವಾರ್ರವರ ಸ್ವಪ್ನದಲ್ಲಿ ತೋರಿ ಅವರನ್ನು ಕುರಿತು "ನೀವು ರಾಜಾಸ್ಥಾನಕ್ಕೆ ಹೋಗಿ ನಾನೇ (ಎಂದರೆ ವಿಷ್ಣುವೇ) ಪರತತ್ತ್ವವೆಂಬ ವಿಷಯವನ್ನು ವೇದಾನ್ತಾದಿ ಶಾಸ್ತ್ರ ಮುಖೇನ ಸ್ಥಾಪಿಸಿ ಬನ್ನಿರಿ" ಎಂದು ಹೇಳಿದರು. ಆಗ ಪೆರಿಯಾಳ್ವಾರ್ರು ದೇವರನ್ನು ಕುರಿತು "ಸ್ವಾಮಿ! ವೇದಾನ್ತಾದಿ ಶಾಸ್ತ್ರಾಭ್ಯಾಸವಿಲ್ಲದ ನನ್ನಿಂದ ಈ ಕಾರ್ಯವು ಹೇಗೆ ಸಾಧ್ಯ?" ಎಂದು ಕೇಳಲು ಅದಕ್ಕೆ ಭಗವಂತನು "ಆ ವಿಷಯದಲ್ಲಿ ನೀವು ಭಯ ಪಡಬೇಡಿರಿ ಆ ರಾಜಸಭೆಗೆ ಹೋದಮೇಲೆ ನಿಮಗೆ ನನ್ನ ಅನುಗ್ರಹದಿಂದ ಎಲ್ಲವೂ ತಿಳಿಯುವುದು" ಎಂದು ಹೇಳಿದರು ಭಗವದಾಜ್ಞೆಯನ್ನು ಶಿರಸಾ ವಹಿಸಿ ಅಳ್ವಾರ್ರವರು ರಾಜಾಸ್ಥಾನವನ್ನು ಸೇರಿ ಅಲ್ಲಿ ಭಗವದನುಗ್ರಹದಿಂದ ಕ್ಷಣಾರ್ಧದಲ್ಲಿ ದಿವ್ಯಜ್ಞಾನವನ್ನು ಪಡೆದು ವೇದಾನ್ತಾದಿ ಸಕಲ ಶಾಸ್ತ್ರಗಳನ್ನೂ ಕರತಲಾಮಲಕದಂತೆ ಅರಿತು ಆ ಸಭೆಯಲ್ಲಿ ಶ್ರೀಮನ್ನಾರಾಯಣನೇ ಪರತತ್ತ್ವವೆಂಬುವುದನ್ನು ಸ್ಥಾಪಿಸಿ ಉಳಿದ ಪಂಡಿತರನ್ನೆಲ್ಲಾ ಜಯಿಸಿದರೆಂಬುದು ಪ್ರಸಿದ್ಧವಾಗಿದೆ. ಇದೇ ವಿಷಯವಾಗಿ ನಮ್ಮ ದ್ರಾವಿಡ ಪ್ರಬಂಧದಲ್ಲಿ "ಪಾಂಡಿಯರ್ ಕೊಂಡಾಡ ಪಟ್ಟರಭಿರಾನ್ ವಂದಾನೆನ್ರು। ಈಂಡಿಯಶಂಕಂ ಎಡುತ್ತು ಊದವೇಂಡಿಯ ವೇದಂಗಳೋದಿ। ವಿಲ್ಲೆಂದು ಕಿಳಿಯ ರತ್ತಾನ್ ಪಾದಂಗಳ್ ಯಾಮುಡೈಯಪತ್ತ್॥ ಎಂದು ತಿರುಪ್ಪಲ್ಲಾಂಡು ಪ್ರಬಂಧದ ತನಿಯನ್‌ನಲ್ಲಿ ನಾವುಗಳೆಲ್ಲಾ ಅನುಸಂಧಿಸುತ್ತೇವೆ.

ಇದೇ ರೀತಿಯಲ್ಲಿ ಶ್ರೀಮನ್ನಾರಾಯಣನೇ ಪರತತ್ತ್ವವೆಂಬ ವಿಚಾರದಲ್ಲಿ ನಮ್ಮ ಪೂರ್ವಾಚಾರ್ಯರುಗಳಾದ ನಾಥಮುನಿ, ಆಳವಂದಾರ್, ಭಗವದ್ರಾಮನುಜಾಚಾರ್ಯರು ಮುಂತಾದವರು ಅನೇಕ ಪ್ರಮಾಣಗಳನ್ನು ದಯಪಾಲಿಸಿರುತ್ತಾರೆ.

**ತತ್ತ್ವಹಿತ ಪುರುಷಾರ್ಥಗಳು :** ಪರತತ್ತ್ವ ವಿಂಥದೆಂದು ತಿಳಿದುಕೊಳ್ಳುವುದಕ್ಕೆ ಪೂರ್ವಭಾವಿಯಾಗಿ ಪರತತ್ತ್ವ ವೆಂದರೆ ಏನು ? ಅದನ್ನು ಯಾತಕ್ಕೆ ತಿಳಿದು ಕೊಳ್ಳಬೇಕು ? ಇದನ್ನು ತಿಳಿದು ಕೊಳ್ಳುವುದರಿಂದ ಪ್ರಯೋಜನವೇನು ? ಎಂಬ ಪ್ರಶ್ನೆಯು ಅನೇಕರಲ್ಲಿ ಹೊರಡಬಹುದು. ಇದನ್ನು ಸ್ವಲ್ಪ ಮಟ್ಟಿಗಾದರೂ ತಿಳಿದು ಕೊಳ್ಳುವುದು ಒಳ್ಳೆಯದು ವೇದವೆಂಬುವುದು ಜೀವರುಗಳ ಎಂದರೆ ಮನುಷ್ಯರ ಹಿತಕ್ಕಾಗಿಯೇ ಭಗವಂತನಿಂದ ಅನುಗ್ರಹಿಸಲ್ಪಟ್ಟ ಶಾಸ್ತ್ರವಾಗಿದೆ. ಇದರಲ್ಲಿರುವ ವಿಷಯಗಳನ್ನು ತತ್ತ್ವ, ಹಿತ, ಪುರುಷಾರ್ಥಗಳೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು ತತ್ತ್ವವೆಂದರೆ ಈ ಬ್ರಹ್ಮಾಂಡದಲ್ಲಿರುವ ವಿಷಯಗಳ ಯಥಾರ್ಥಸ್ಥಿತಿ. ತತ್ತ್ವತ್ರಯ ವೆಂಬ ಹೆಸರಿನಿಂದ ಪ್ರಪಂಚರೂಪವಾದ ಅಚಿತ್ತು, ಜೀವರುಗಳು ಅಥವಾ ಚಿತ್ತು ಮತ್ತು ಇವೆರಡಕ್ಕೂ ನಿಯಾಮಕನಾಗಿ ಇವುಗಳ ಸ್ಥಿತಿಗತಿಗಳಿಗೆ ಕಾರಣನಾದ ಈಶ್ವರ ಎಂದು ತತ್ತ್ವವು ಮೂರು ಭಾಗವಾಗಿವೆ. ಪುರುಷಾರ್ಥ ವೆಂದರೆ ಮನುಷ್ಯನು ಆಶಿಸುವ ಪ್ರಯೋಜನ. ಈ ಪ್ರಯೋಜನವೇ ಆನಂದಾನುಭವವು. ಇದನ್ನು ಐಹಿಕ

ಸುಖವೆಂದೂ ಪಾರಲೌಕಿಕ ಸುಖವೆಂದೂ ಎರಡು ವಿಧವಾಗಿ ವಿಂಗಡಿಸಬಹುದು. ಐಹಿಕ ಸುಖವು ನಾವು ಈ ಲೋಕದಲ್ಲಿ ಆಸೆಪಡುವ ದೇಹಾರೋಗ್ಯ ಮತ್ತು ಇಂದ್ರಿಯಗಳ ಮೂಲಕವಾಗಿ ಉಂಟಾಗುವ ಆನಂದಾನುಭವ ಪಾರಲೌಕಿಕ ಸುಖವು ಸ್ವರ್ಗಾದಿ ಭೋಗಗಳೆಂದೂ ಮೋಕ್ಷಾನುಭವವೆಂದೂ ಎರಡು ಬಗೆಯಾಗಿ ಇರುವುದು.

ಇಹಲೋಕದ ಸುಖಗಳು ಅತ್ಯಲ್ಪವಾದುದ್ದಾಗಿಯೂ ಅಪಾರವಾದ ದುಃಖದಿಂದ ಮಿಶ್ರವಾದುದ್ದಾಗಿಯೂ ಇರುವುದರಿಂದಲೂ ಮತ್ತು ಜೀವಿತಕಾಲದಲ್ಲಿ ಅತ್ಯಲ್ಪ ಕಾಲ ಮಾತ್ರ ಅನುಭವಕ್ಕೆ ಬರುವುದಾಗಿಯೂ ಇರವುದರಿಂದ ಇದು ನಿಜವಾದ ಸುಖವಲ್ಲ ವೆಂದು ತತ್ತ್ವವಿತ್ತುಗಳ ಅಭಿಪ್ರಾಯ. ಸ್ವರ್ಗಾದಿ ಪಾರಲೌಕಿಕ ಸುಖಗಳು ಬಹು ಕಾಲದವರೆಗೆ ಆನಂದವನ್ನು ಕೊಡತಕ್ಕವುಗಳಾದರೂ ಆ ಸ್ವರ್ಗಾನುಭವ ಕಾಲವು ಕಳೆದಮೇಲೆ ಪುನಃ ದುಃಖಾವಹವಾದ ಈ ಭೂಲೋಕದಲ್ಲಿ ಹುಟ್ಟಬೇಕಾಗುವುದರಿಂದ ಅವೂ ಶಾಶ್ವತವಾದ ಸುಖವಲ್ಲವೆಂದು ನಮ್ಮ ಹಿರಿಯರ ಅಭಿಪ್ರಾಯ.

ಶಾಶ್ವತವಾದ ಅಪರಿಮಿತಾನಂದಸೌಖ್ಯವು ಸಂಸಾರ ನಿವೃತ್ತಿಪೂರ್ವಕವಾಗಿ ಪರಮ ಪದವೆಂದು ಕರೆಯಲ್ಪಡುವ ಮೋಕ್ಷ ಸಾಂರಾಜ್ಯದಲ್ಲೇ ಉಂಟಾಗುವುದೆಂಬುದಾಗಿ ಶಾಸ್ತ್ರಗಳಿಂದ ನಮಗೆ ತಿಳಿದು ಬರುತ್ತದೆ ಈ ಮೋಕ್ಷಸಾಂರಾಜ್ಯವನ್ನೇ ನಿಜವಾದ ಪುರುಷಾರ್ಥವೆಂದೂ, ಇದನ್ನು ಪಡೆಯುವುದಕ್ಕಾಗಿಯೇ ನಾವೆಲ್ಲರೂ ಪ್ರಯತ್ನ ಪಡ ಬೇಕೆಂದೂ ಶಾಸ್ತ್ರಗಳೂ ಮತ್ತು ನಮ್ಮ ಹಿರಿಯರೂ ಘೋಷಿಸಿರುತ್ತಾರೆ

'ಹಿತ' ವೆಂದರೆ ಜೀವಾತ್ಮರುಗಳಾದ ನಾವೆಲ್ಲರೂ ಇಹಪರ ಸಾಧನೆಗಳಿಗಾಗಿಯೂ ಮತ್ತು ಮೋಕ್ಷಸಾಧನೆಗಾಗಿಯೂ ಅನುಸರಿಸಬೇಕಾದ ಉಪಾಯ.

ಈರೀತಿಯಾಗಿ ತತ್ತ್ವಹಿತ ಪುರುಷಾರ್ಥಗಳನ್ನು ಬೋಧಿಸುವುದೇ ವೇದದ ಮುಖ್ಯ ಕರ್ತವ್ಯವು

**ಪರತತ್ತ್ವ ಜ್ಞಾನವನ್ನು ಶಬ್ದ ಪ್ರಮಾಣದಿಂದಲೇ ಅರಿಯಬೇಕು :**

ಪರತತ್ತ್ವವನ್ನು ಪ್ರತ್ಯಕ್ಷಾನುಮಾನಾದಿ ಪ್ರಮಾಣಗಳಿಂದ ತಿಳಿಯುವುದಕ್ಕಾಗು ವುದಿಲ್ಲ. ಪ್ರತಿಯೊಂದು ಪ್ರಾಣಿಯಲ್ಲಿಯೂ ಒಂದೊಂದರಂತೆ ಅಡಗಿರುವ ಜೀವಾತ್ಮನೇ ನಮ್ಮ ಇಂದ್ರಿಯಗಳಿಗೆ ಗೋಚರಿಸದಿದ್ದಮೇಲೆ, ಆ ಒಂದೊಂದು ಜೀವಾತ್ಮನಲ್ಲಿಯೂ ಅಂತರ್ಯಾಮಿಯಾಗಿ ಅಡಗಿರುವ ಪರಮಾತ್ಮನು ನಮ್ಮ ಇಂದ್ರಿಯಗಳಿಗೆ ಅಗೋಚರ ನೆಂಬ ವಿಷಯವನ್ನು ಹೇಳಬೇಕಾದ್ದೇ ಇಲ್ಲ ಹೀಗೆ ಇಂದ್ರಿಯಾ ಗೋಚರನಾದ ಪರಮಾತ್ಮನ ವಿಚಾರವನ್ನು ನಾವು ವೇದಾಂತಾದಿ ಶಾಸ್ತ್ರಗಳಿಂದಲೇ ಅರಿಯಬೇಕು.

ಶ್ರುತಿ ಸ್ಮೃತೀತಿಹಾಸ ಪುರಾಣಾದಿಗಳನ್ನು ಪರತತ್ತ್ವ ನಿರ್ಧಾರಣ ಶಾಸ್ತ್ರಗಳನ್ನಾಗಿ ಅಂಗೀಕರಿಸಿರುವವರು ಆ ಶಾಸ್ತ್ರಗಳಲ್ಲಿ ಹೇಳಿರುವುದನ್ನೆಲ್ಲಾ ಸಂಪೂರ್ಣವಾಗಿ ಸತ್ಯವಾದುವೆಂದೇ ಅಂಗೀಕರಿಸಬೇಕು. ತಮ್ಮ ಬುದ್ಧಿಗೆ ತೋರಿದಂತೆ ಕೆಲವು ಭಾಗಗಳನ್ನು ಮಾತ್ರವೇ ಅಂಗೀಕರಿಸಿ ಉಳಿದವುಗಳನ್ನು ಅಸತ್ಯಗಳೆಂದಾಗಲಿ, ಅಸಾರಗಳೆಂದಾಗಲಿ, ಅಮುಖ್ಯಗಳೆಂದಾಗಲಿ ನಿರಾಕರಿಸಕೂಡದು. ಹಾಗೆ ನಿರಾಕರಿಸುವುದಕ್ಕೆ ಅವರಿಗೆ ಯಾವ ಅಧಿಕಾರವೂ ಇರುವುದಿಲ್ಲ ಶಬ್ದ ಪ್ರಮಾಣದ ಪ್ರಾಶಸ್ತ್ಯದ ವಿಷಯದಲ್ಲಿ ಇವರ ಬುದ್ಧಿಚಾತುರ್ಯಕ್ಕೊಳಪಟ್ಟ ತರ್ಕಗಳನ್ನು ಪ್ರಯೋಗಿಸಿ ಇಷ್ಟಬಂದುದನ್ನು ಅಂಗೀಕರಿಸುವುದು ಇಷ್ಟವಿಲ್ಲದ್ದನ್ನು ತಳ್ಳಿಬಿಡುವುದು ಈ ರೀತಿಯಾಗಿ ಮಾಡುವುದು ನ್ಯಾಯವಲ್ಲ ಶಾಸ್ತ್ರಗಳಲ್ಲಿ ಎಲ್ಲಾದರೂ ಒಂದು ಕಡೆಯಲ್ಲಿ ಹೇಳಿರುವ ವಾಕ್ಯಗಳಿಗೆ ಅರ್ಥವನ್ನು ಮಾಡುವಾಗ ಬೇರೆ ಕಡೆಗಳಲ್ಲಿ ಅದೇ ಸಂದರ್ಭದಲ್ಲಿ ಹೇಳಿರುವ ಅದೇ ವಿಧವಾದ ವಾಕ್ಯಗಳಿಗಿರುವ ಅರ್ಥವನ್ನು ತಿಳಿದು ಒಟ್ಟಿನಲ್ಲಿ ಪೂರ್ವಾಪರ ವಿರೋಧವಿಲ್ಲದಂತೆ ಎಲ್ಲಾ ಕಡೆಗಳಲ್ಲಿಯೂ ಏಕಾಭಿಪ್ರಾಯವನ್ನು ಸೂಚಿಸುವಂತೆಯೇ ಅರ್ಥಮಾಡಬೇಕು. ಒಂದುಕಡೆಯಲ್ಲಿ ಹೇಳಿರುವ ಅರ್ಥಕ್ಕೆ ವ್ಯತಿರಿಕ್ತವಾಗಿ ಇನ್ನೊಂದುಕಡೆ ಅರ್ಥ ಮಾಡಕೂಡದು. ಹಾಗೆ ಮಾಡಿದರೆ ಎರಡು ಅರ್ಥಗಳಲ್ಲಿ ಒಂದು ಸತ್ಯವಾಗಿಯೂ, ಮತ್ತೊಂದು ಅಸತ್ಯವಾಗಿಯೂ ಆಗುವುದು. ಅಪಾರ್ಥಗಳಾಗಲಿ ವಿರುದ್ಧಾರ್ಥಗಳಾಗಲಿ ಎಲ್ಲಿಯೂ ಬರಕೂಡದು. ವೇದಾನ್ತಾದಿ ಶಾಸ್ತ್ರಗಳೆಲ್ಲವೂ ಏಕಕಂಠವಾಗಿ ಏಕಾಭಿಪ್ರಾಯವನ್ನೇ ಹೊರಪಡಿಸುತ್ತವೆಂದು ತಿಳಿಯಬೇಕು. ಒಂದೊಂದು ಸಂದರ್ಭದಲ್ಲಿ ಒಂದೊಂದು ವಿಧವಾಗಿ ಅಲ್ಲಲ್ಲಿ ಹೇಳಿದ್ದರೂ ಅವೆಲ್ಲವೂ ಏಕಾಭಿಪ್ರಾಯವುಳ್ಳವುಗಳೇ ಎಂದು ತಿಳಿಯಬೇಕು.

ಇದಕ್ಕೆ ಒಂದು ಉದಾಹರಣೆಯಾಗಿ "ಸಮಸ್ತಕಲ್ಯಾಣ ಗುಣಾತ್ಮಕೋಸೌ" (ವಿಷ್ಣುಪು ೬೫-೮೪-೮೫) ಎಂದು ವಿಷ್ಣುಪುರಾಣದಲ್ಲಿಯೂ "ಸಶಂಖಚಕ್ರಂ ಸಕಿರೀಟ ಕುಂಡಲಂ। ಸಪೀತವಸ್ತ್ರಂ ಸರಸೀರುಹೇಕ್ಷಣಂ" ಎಂದು ವಿಷ್ಣು ಸಹಸ್ರನಾಮಾಧ್ಯಾಯದಲ್ಲಿಯೂ ಹೇಳಿದೆ "ಸತ್ಯಂಜ್ಞಾನ ಮನನ್ತಂಬ್ರಹ್ಮ" ಎಂದೂ "ನಿಷ್ಕಳೋ ನಿರಂಜನೋ ನಿರ್ವಿಕಲ್ಪೋ ನಿರಾಖ್ಯಾತಶ್ಶುದ್ಧೋದೇವ ಏಕೋನಾರಾಯಣಃ" ಎಂದು ಬೇರೆಕಡೆಗಳಲ್ಲಿಯೂ ಹೇಳಿವೆ. ಒಬ್ಬನೇ ಆದ ಪರಮಾತ್ಮನಿಗೆ ಕಿರೀಟ ಕುಂಡಲಾದಿಗಳೊಡನೆಯೂ, ಚತುರ್ಭುಜಾದಿಗಳೊಡನೆಯೂ ದಿವ್ಯ ಮಂಗಳ ವಿಗ್ರಹ ಸ್ವರೂಪವು ಒಂದು ಕಡೆಯಲ್ಲಿ ಹೇಳಿವೆ ಮತ್ತೊಂದು ಕಡೆ ಅವನು ನಿರ್ವಿಕಾರನು, ಅವನಿಗೆ ರೂಪಗಳಾಗಲೀ, ಗುಣಗಳಾಗಲಿ ಇಲ್ಲ ಎಂದು ಹೇಳಿದೆ ಒಂದು ಮತದವರು ತಮ್ಮ ತರ್ಕ ಮಹಾತ್ಮ್ಯದಿಂದ ಹೇಳುವುದೇನೆಂದರೆ—ರೂಪವೂ ರೂಪರಾಹಿತ್ಯವೂ, ಗುಣಪೂರ್ಣತ್ವವೂ ಗುಣರಾಹಿತ್ಯವೂ, ಇವು ವಿರುದ್ಧ ಧರ್ಮಗಳಾದ್ದರಿಂದ ಒಂದೇ ವ್ಯಕ್ತಿಯಲ್ಲಿ ವಿರುದ್ಧ ಧರ್ಮಗಳನ್ನು ಹೇಳುವುದು ಸರಿಯಲ್ಲವೆಂದು

ಹೇಳುತ್ತಾರೆ; ಮತ್ತು ಇವುಗಳಲ್ಲಿ ಒಂದು ಸಗುಣ ಬ್ರಹ್ಮವನ್ನೂ ಮತ್ತೊಂದು ನಿರ್ಗುಣಬ್ರಹ್ಮವನ್ನೂ ಪ್ರತಿಪಾದಿಸುವುವು ಎಂದು ಹೇಳುತ್ತಾರೆ ಇದು ವೇದ ವಿರುದ್ಧವು ಇದಕ್ಕೆ ಸರಿಯಾದ ಅರ್ಥವೇನೆಂದರೆ—ಪರಬ್ರಹ್ಮನು ಒಬ್ಬನೇ ಆವನಿಗೆ 'ಅವ್ಯಕ್ತ' ರೂಪ ಮತ್ತು ಭಕ್ತಾನುಗ್ರಹಾರ್ಥವಾಗಿ 'ವ್ಯಕ್ತ' ಅಥವಾ 'ದಿವ್ಯ ಮಂಗಳ ವಿಗ್ರಹ ಸ್ವರೂಪ' ವೆಂಬ ಎರಡು ರೂಪಗಳೂ ಉಂಟು ಅವ್ಯಕ್ತನಾದ ಪರಬ್ರಹ್ಮನಿಗೆ ನಾಮರೂಪಗಳಿಲ್ಲ ಆದರೆ ಭಕ್ತಾದಿಗಳನ್ನು ಅನುಗ್ರಹಿಸ ಫುದಕ್ಕಾಗಿ ರಾಮಕೃಷ್ಣಾದಿ ರೂಪಗಳಿಂದ ತೋರುತ್ತಿರುವನು; ಮತ್ತು ಭಕ್ತರ ಪೂಜಾದಿಗಳಿಗಾಗಿ ದೇವಾಲಯಗಳಲ್ಲಿರುವ ವಿಗ್ರಹಗಳಲ್ಲಿಯೂ ನೆಲೆಸಿರುವನು ಇದೇ ವಿಷಯವಾಗಿ ಜಿತನ್ತಾಸ್ತೋತ್ರದಲ್ಲಿ

ನತೇರೂಪಂ ನಚಾಕಾರೋ । ನಾಯುಧಾನಿ ನಚಾಸ್ಪದಂ ।
ತಥಾಪಿ ಪುರುಷಾಕಾರೋ । ಭಕ್ತಾನಾಂ ತ್ವಂಪ್ರಕಾಶಸೇ ॥

ಎಂದರೆ—ಎಲೈ ಪರಮಾತ್ಮನೇ! ಶಾಸ್ತ್ರಗಳಲ್ಲಿ ಹೇಳಿರುವ ನಿನ್ನರೂಪ, ಆಕಾರ, ಆಯುಧ ಇತ್ಯಾದಿಗಳಿಂದ ನಿನಗೆ ಯಾವವಿಧವಾದ ಪ್ರಯೋಜನವೂ ಇಲ್ಲ ಆದಾಗ್ಯೂ ನಿನ್ನ ಭಕ್ತರನ್ನು ಅನುಗ್ರಹಿಸುವುದಕ್ಕಾಗಿ ದಿವ್ಯಮಂಗಳ ವಿಗ್ರಹವೊಡನೆಯೂ ಮತ್ತು ಆಯುಧಗಳೊಡನೆಯೂ ನೀನು ತೋರುತ್ತೀಯೆ.

## ಲಿಂಗಪುರಾಣದಲ್ಲಿರುವ ರುದ್ರಪಾರಮ್ಯ ವಚನಗಳಿಗೆ ಸಮಾಧಾನ—

ಶ್ರೀಮನ್ನಾರಾಣನೇ ಪರತತ್ತ್ವವೆಂದು ನಾವು ಹೇಳುತ್ತಿರುವಲ್ಲಿ ಪುರಾಣಗಳಲ್ಲಿ ಒಂದಾದ ಲಿಂಗಪುರಾಣದಲ್ಲಿ ಒಂದು ಕಡೆ ರುದ್ರನಿಗೆ ಪಾರಮ್ಯವನ್ನು ಹೇಳಿ

ಯುವಾಂಪ್ರಸೂತೌಗಾತ್ರೇಭ್ಯೋ । ಮಮಪೂರ್ವಂ ಸನಾತನೌ ।
ಅಯಂಮೇದಕ್ಷಿಣೇಪಾರ್ಶ್ವೇ । ಬ್ರಹ್ಮಾಲೋಕಪಿತಾಮಹಃ ।
ವಾಮೇಪಾರ್ಶ್ವೇಚಮೇವಿಷ್ಣು । ರ್ವಿಶ್ವಾತ್ಮಾಹೃದಯೋದ್ಭವಃ ॥

ಎಂದು ಬ್ರಹ್ಮ ವಿಷ್ಣುಗಳು ರುದ್ರನಿಂದ ಹುಟ್ಟಿದವರೆಂದು ಹೇಳಿರುವುದರಿಂದಲೂ, ಮತ್ತು ಆ ರುದ್ರನನ್ನೇ ಪರದೈವವನ್ನಾಗಿ ಉಪಾಸಿಸುವವರು ಅನೇಕರಿರುವುದ-ರಿಂದಲೂ ರುದ್ರನನ್ನು ಪರತತ್ತ್ವವೆಂದು ಯಾತಕ್ಕೆ ಒಪ್ಪಿಕೊಳ್ಳಕೂಡದು—ಎಂಬ ಆಕ್ಷೇಪಕ್ಕೆ ಈ ಕೆಳಗೆ ಸಮಾಧಾನವು ಹೇಳಲ್ಪಡುವುದು.

(1) ಮೊಟ್ಟಮೊದಲು ಲಿಂಗಪುರಾಣವು ಸಾತ್ವಿಕಪುರಾಣವಲ್ಲ ಅದು ತಾಮಸ ಪುರಾಣವೆಂದು ಮೊದಲೇ ಸೂಚಿಸಿದೆ. ಆದ್ದರಿಂದ ಅದರಲ್ಲಿರುವ ವಾಕ್ಯಗಳನ್ನು ತತ್ತ್ವಪರಗಳನ್ನಾಗಿ ಅಂಗೀಕರಿಸುವುದಕ್ಕಾಗುವುದಿಲ್ಲ. ಈ ವಿಚಾರವು ಮುಂದೆಯೂ ವಿಶದಮಾಡಲ್ಪಡುತ್ತದೆ.

ಪರಬ್ರಹ್ಮನನ್ನು ಶಾಸ್ತ್ರಗಳ ಮೂಲಕವಾಗಿಯೇ ಅರಿಯಬೇಕೇ ವಿನಾ ಬೇರೆ ಪ್ರಮಾಣಗಳಿಂದ ಅವನು ಅಗೋಚರನೆಂಬುದನ್ನು ಭಗವಾನ್ ವೇದವ್ಯಾಸ ಮಹರ್ಷಿಗಳು ತಮ್ಮ ಬ್ರಹ್ಮಸೂತ್ರದ ಮೂರನೆಯ ಸೂತ್ರವಾದ "ಶಾಸ್ತ್ರಯೋನಿತ್ವಾತ್" ಎಂಬ ಸೂತ್ರದಲ್ಲಿ ನಿರ್ಧರಿಸಿ, ನಾಲ್ಕನೆಯ ಸೂತ್ರವಾದ "ತತ್ತುಸಮನ್ವಯಾತ್" ಎಂಬ ಸೂತ್ರದಿಂದಲೂ ಅದನ್ನು ಸ್ಥಿರಪಡಿಸಿರುತ್ತಾರೆ. ಇದೇ ನಮಗೆ ಪ್ರಮಾಣವು.

**ವೇದಾರ್ಥವನ್ನು ಗ್ರಹಿಸುವುದಕ್ಕೆ ಸ್ಮೃತೀತಿಹಾಸ ಪುರಾಣಾದಿಗಳು ಆವಶ್ಯಕ:**

ಈ ವೇದವೆಂಬುವುದು ಶಬ್ದರಾಶಿಯ ರೂಪದಿಂದ ಸಮುದ್ರದಂತೆ ಅತ್ಯಂತ ಅಗಾಧವಾದುದ್ದಾಗಿಯೂ ಸಾರಾಸಾರ ವಿವೇಕಿಗಳಾದ ಮಹಾ ಜ್ಞಾನಿಗಳಿಗಲ್ಲದೆ ಸಾಮಾನ್ಯ ಜನರಿಗೆ ಇದರ ಅರ್ಥವು ದುರವಗಾಹವಾದುದ್ದಾಗಿಯೂ, ಕಷ್ಟಸಾಧ್ಯವಾದುದ್ದಾಗಿಯೂ ಇರುವುದು. ಇವುಗಳ ಸಾರವನ್ನೇ ಸ್ಮೃತೀತಿಹಾಸ ಪುರಾಣಾದಿಗಳಲ್ಲಿ ಬ್ರಹ್ಮಜ್ಞರಾದ ಋಷಿಗಳು ವಿಶದೀಕರಿಸಿರುತ್ತಾರೆ. ಭಗವಂತನಿಂದಲೇ ಅನುಗ್ರಹಿಸಲ್ಪಟ್ಟ ಪಾಂಚರಾತ್ರಶಾಸ್ತ್ರ, ಭಗವದ್ಗೀತೆ ಇತ್ಯಾದಿ ಶಾಸ್ತ್ರಗಳೂ ಪರತತ್ತ್ವದ ವಿಚಾರವನ್ನು ವಿಸ್ತರಿಸುತ್ತವೆ. ಇದರಿಂದ ಪರತತ್ತ್ವದ ವಿಚಾರವನ್ನು ತಿಳಿಯಬೇಕಾದರೆ ಶ್ರುತಿ, ಸ್ಮೃತೀತಿಹಾಸ ಪುರಾಣಾದಿಗಳನ್ನು ಚೆನ್ನಾಗಿ ಓದಿ ತಿಳಿಯಬೇಕು. ಈ ವಿಚಾರದಲ್ಲಿ

> ಶ್ರುತಿ ಸ್ಮೃತಿ ರುಭೇನೇತ್ರೇ । ಪುರಾಣಂ ಹೃದಯಂ ಸ್ಮೃತಂ ।
> ಶ್ರುತಿ ಸ್ಮೃತಿ ಪುರಾಣೋಕ್ತ । ವಿಪ್ರಾಣಾಂಜ್ಞಾನವರ್ಧನಂ ॥
> ಏಕೇನಹೀನಃ ಕಾಣಸ್ಸ್ಯಾತ್ । ದ್ವಾಭ್ಯಾಮಂಧಃ ಪ್ರಕೀರ್ತಿತಃ ।
> ಪುರಾಣಹೀನೋ ಹೃಚ್ಛೂನ್ಯ । ಸ್ತಸ್ಮಾದೇತಾನ್ವಿಲೋಕಯೇತ್ ॥

ಎಂಬ ಸ್ಮೃತಿವಾಕ್ಯರೀತ್ಯಾ ಶ್ರುತಿ ಮತ್ತು ಸ್ಮೃತಿಗಳು ಪರತತ್ತ್ವ ದರ್ಶನಕ್ಕೆ ಎರಡು ಕಣ್ಣುಗಳಂತಿದ್ದು ಆ ಪರತತ್ತ್ವದ ವಿಷಯವು ಹೃದ್ಗತವಾಗಬೇಕಾದರೆ ಪುರಾಣಗಳನ್ನು ಓದಿ ತಿಳಿದುಕೊಳ್ಳಬೇಕೆಂದು ಅರಿಯಬೇಕು.

**ಪುರಾಣಗಳಲ್ಲಿ ಸಾತ್ತ್ವಿಕಪುರಾಣಗಳೇ ಪರತತ್ತ್ವ ನಿರ್ಣಯಕ್ಕೆ ಗ್ರಾಹ್ಯಗಳು :**

ಈ ಪುರಾಣಗಳಲ್ಲಿ ಒಂದು ವಿಷಯವನ್ನು ಅವಶ್ಯಕವಾಗಿ ಗಮನಿಸಬೇಕು. ಪುರಾಣಗಳು ಸಾತ್ತ್ವಿಕಪುರಾಣ, ರಾಜಸಪುರಾಣ ಮತ್ತು ತಾಮಸಪುರಾಣಗಳೆಂದು ಮೂರಾಗಿ ವಿಭಾಗಿಸಲ್ಪಟ್ಟಿವೆ. ಈ ವಿಷಯವು ಮತ್ಸ್ಯಪುರಾಣದಲ್ಲಿ ಈ ರೀತಿಯಾಗಿದೆ.

> ಯಸ್ಮಿನ್ಕಲ್ಪೇತುಯತ್ಪ್ರೋಕ್ತಂ । ಪುರಾಣಂ ಬ್ರಹ್ಮಣಾಪುರಾ ।
> ತಸ್ಯತಸ್ಯತು ಮಾಹಾತ್ಮ್ಯಂ । ತತ್ಸ್ವರೂಪೇಣವರ್ಣ್ಯತೇ ।
> ಆಗ್ನೇಶ್ಶಿವಸ್ಯಮಾಹಾತ್ಮ್ಯಂ । ತಾಮಸೇಷು ಪ್ರಕೀರ್ತ್ಯತೇ ।

ರಾಜಸೇಷುಚ ಮಾಹಾತ್ಮ್ಯ । ಮಧಿಕಂಬ್ರಹ್ಮಣೋವಿದುಃ ।
ಸಂಕೀರ್ಣೇಷು ಸರಸ್ವತ್ಯಾಃ । ಪಿತೄಣಾಂಚನಿಗದ್ಯತೇ ।
ಸಾತ್ವಿಕೇಷ್ವಥಕಲ್ಪೇಷು । ಮಾಹಾತ್ಮ್ಯಮಧಿಕಂಹರೇಃ ।
ತೇಷ್ವೇವಯೋಗಸಂಸಿದ್ಧಾಃ । ಗಮಿಷ್ಯನ್ತಿ ಪರಾಂಗತಿಂ ॥

ಇದರಿಂದ ಪುರಾಣಗಳಲ್ಲಿ ಸಾತ್ವಿಕ, ರಾಜಸ ತಾಮಸ ವಿಭಾಗಗಳು ಶಾಸ್ತ್ರ ಸಿದ್ಧವು ಇವುಗಳಲ್ಲಿ ವಿಷ್ಣುಪುರಾಣವು ಸಾತ್ವಿಕ ವಿಭಾಗದಲ್ಲಿ ಸೇರಿವೆ ಇವರಿಂದ ಪರತತ್ತ್ವ ನಿರ್ಣಯದ ವಿಷಯದಲ್ಲಿ ಸಾತ್ವಿಕಪುರಾಣವನ್ನೇ ಆಧಾರವಾಗಿ ತೆಗೆದುಕೊಳ್ಳಬೇಕು ಆದ್ದರಿಂದ ಪರತತ್ತ್ವ ವಿಚಾರವು, ಶ್ರುತಿ ಸ್ಮೃತೀತಿಹಾಸಾದಿಗಳು ಮತ್ತು ಸಾತ್ವಿಕ ಪುರಾಣಗಳು ಇವುಗಳಲ್ಲಿ ಪರಬ್ರಹ್ಮನ ವಿಚಾರದಲ್ಲಿಹೇಳಿರುವ ವಿಷಯಗಳನ್ನೆಲ್ಲಾ ಸರಿಯಾಗಿ ಗ್ರಹಿಸುವುದರಿಂದಲೇ ತಿಳಿಯುವುದೇ ವಿನಾ ನಮ್ಮ ಬುದ್ಧಿಗೆ ತೋರಿದಂತೆ ಹೇಳುವ ಕುತರ್ಕಗಳಿಗೆ ಸಿಕ್ಕುವುದಿಲ್ಲ.

## ಪರಬ್ರಹ್ಮ ನಿರ್ಧಾರಕ ಸೂತ್ರ (Definition) .

ಭಗವಾನ್ ವೇದವ್ಯಾಸ ಮಹರ್ಷಿಗಳವರು ತಮ್ಮ ಬ್ರಹ್ಮಸೂತ್ರದ ಎರಡನೆಯ ಸೂತ್ರದಲ್ಲಿ "ಜನ್ಮಾದ್ಯಸ್ಯಯತಃ" ಎಂದು ಪರಬ್ರಹ್ಮ ನಿರ್ಧಾರಕ ಸೂತ್ರವನ್ನಾಗಿ ಹೇಳಿರುವರು ಇದರ ಅರ್ಥವೇನೆಂದರೆ-ಚರಾಚರಾತ್ಮಕವಾದ ಈ ಪ್ರಪಂಚಕ್ಕೆ ಯಾವನು ಸೃಷ್ಟಿಸ್ಥಿತಿ ಮತ್ತು ಸಂಹಾರಕರ್ತನೋ ಅವನೇ ಪರಬ್ರಹ್ಮನು ಇದನ್ನೇ ತೈತ್ತಿರಿಯೋಪನಿಷತ್ತಿನಲ್ಲಿ "ಯತೋವಾ ಇಮಾನಿ ಭೂತಾನಿ ಜಾಯನ್ತೇ ॥ ಯೇನ ಜಾತಾನಿ ಜೀವನ್ತಿ। ಯತ್ಪ್ರಯಂ ತ್ಯಭಿಸಂ ವಿಶನ್ತಿ। ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇತಿ॥ ಎಂದರೆ ಯಾವನಿಂದ ಚಿದಚಿದ್ರೂಪವಾದ ಈ ಪ್ರಪಂಚವು ಉತ್ಪತ್ತಿಯಾಯಿತೋ, ಯಾವನ ಆಧಾರದಿಂದ ಉತ್ಪತ್ತಿಯಾದ ಈ ಜಗತ್ತು ಜೀವಿಸುತ್ತಿದೆಯೋ ಮತ್ತು ಕೊನೆಯಲ್ಲಿ ಯಾವನಲ್ಲಿ ಈ ಜಗತ್ತು ಲಯವನ್ನು ಹೊಂದುವುದೋ ಅವನೇ ಪರಬ್ರಹ್ಮವು ಮತ್ತು ಅವನೇ ಉಪಾಸಿಸಲ್ಪಡಬೇಕಾದವನು

ಈ ಪರಬ್ರಹ್ಮನನ್ನೇ ಮಹೋಪನಿಷತ್ತಿನಲ್ಲಿ "ಏಕೋಹವೈನಾರಾಯಣ ಆಸೀನ್ನ ಬ್ರಹ್ಮಾನ್ನೇಶಾನಃ" ಎಂದರೆ ಆ ಪರಬ್ರಹ್ಮನು ಒಬ್ಬನೇ, ಅವನೇ ಶ್ರೀಮನ್ನಾರಾಯಣನು, ಅವನೇ ಪರತತ್ತ್ವವು, ಬ್ರಹ್ಮರುದ್ರಾದಿಗಳು ಪರತತ್ತ್ವಗಳಲ್ಲ ಎಂದು ಕಂಠೋಕ್ತವಾಗಿ ಹೇಳಿರುವುದರಿಂದ ಪರತತ್ತ್ವವು ಶ್ರೀಮನ್ನಾರಾಯಣನೇ ಎಂದು ಇದರಿಂದ ಸಿದ್ಧಿಸುವುದು ಈ ರೀತಿಯಾದ ಸಹಸ್ರಾರು ಪ್ರಮಾಣಗಳಿವೆ.

## ವೇದಾರ್ಥಗಳನ್ನು ಸ್ಮೃತೀತಿಹಾಸ ಪುರಾಣಾದಿಗಳಿಗೆ ಸಮಂಜಸಮಾಡಿಯೇ ಹೊಂದಿಸಬೇಕು:

ಈ ವೇದಾನ್ತ ವಿಚಾರದಲ್ಲಿ ನಾವು ತಿಳಿಯಬೇಕಾದ ಮುಖ್ಯಾಂಶವೊಂದುಂಟು.

(2) ಎರಡನೆಯದಾಗಿ ರುದ್ರನಿಂದ ಬ್ರಹ್ಮ ವಿಷ್ಣುಗಳು ಹುಟ್ಟಿದರೆಂಬ ವಿಷಯವು ಯಥಾರ್ಥವಲ್ಲವೆಂಬುವುದನ್ನು ಆ ರುದ್ರನು ತಾನೇ ವಿಷ್ಣುವಿನೊಡನೆ ಹೇಳುವ ವಾಕ್ಯಗಳಿಂದ ಸ್ಪಷ್ಟವಾಗುವುದು. ಅವು ಯಾವುವೆಂದರೆ ಹರಿವಂಶದಲ್ಲಿ (೨೭೯–೪೭)

ಅಂಜಲಿಂಸಂಪುಟಂ ಕೃತ್ವಾ । ವಿಷ್ಣುಮುದ್ದಿಶ್ಯಶಂಕರಃ ।
ಉಮಯಾಸಾರ್ಧಮೀಶಾನೋ । ಯಥಾರ್ಥಂ ವಕ್ತುಮುಪ್ಯೈಹತ ॥
ಕ ಇತಿಬ್ರಹ್ಮಣೋನಾಮ । ಈಶೋಹಂಸರ್ವದೇಹಿನಾಂ ।
ಆವಾಂತವಾಂಗಸಂಭೂತೌ । ತಸ್ಮಾತ್ ಕೇಶವನಾಮವಾನ್ ॥

ಎಂದು ಆ ಶಂಕರನು ತಾನೇ ವಿಷ್ಣುವನ್ನು ಕುರಿತು—ರುದ್ರನಾದ ತಾನೂ ಮತ್ತು ಚತುರ್ಮುಖ ಬ್ರಹ್ಮನೂ ಇಬ್ಬರೂ ನಾರಾಯಣನಿಂದ ಹುಟ್ಟಿದವರೆಂದು ಹೇಳಿರುವುದರಿಂದ ಲಿಂಗಪುರಾಣ ವಚನವು ಯಥಾರ್ಥವಲ್ಲವೆಂದು ತಿಳಿಯಬೇಕು.

(3) ನಾರಾಯಣೋಪನಿಷತ್ತಿನಲ್ಲಿ "ನಾರಾಯಣಾದ್ಬ್ರಹ್ಮಾಜಾಯತೇ । ನಾರಾಯಣಾದ್ರುದ್ರೋಜಾಯತೇ" ಎಂದರೆ ಬ್ರಹ್ಮ ರುದ್ರಾದಿಗಳು ಶ್ರೀಮನ್ನಾರಾಯಣನಿಂದ ಹುಟ್ಟಿದವರು ಎಂದು ಹೇಳಿದೆ. ಮತ್ತು ಹಿಂದೆಯೇ ಹೇಳಿರುವಂತೆ ಮಹೋಪನಿಷತ್ತಿನಲ್ಲಿ ಹೇಳಿರುವ "ಏಕೋಹವೈನಾರಾಯಣ ಆಸೀತ್ ನಬ್ರಹ್ಮಾನೇಶಾನಃ" ಎಂಬ ವಾಕ್ಯವೂ ಇಲ್ಲಿ ಅನುಸಂಧೇಯವು.

(4) ಅದೂ ಅಲ್ಲದೆ ಪ್ರಪಂಚ ಸೃಷ್ಟಿಕಾಲದಲ್ಲಿ "ವಿರೂಪಾಕ್ಷಾಯ ಬ್ರಹ್ಮಣಃ ಪುತ್ರಾಯ ಜ್ಯೇಷ್ಠಾಯ ಶ್ರೇಷ್ಠಾಯ" (ಛಾಂ. ಉ) ಎಂದರೆ ನಾರಾಯಣನಿಗೆ ಚತುರ್ಮುಖ ಬ್ರಹ್ಮನು ಮೊದಲು ಹುಟ್ಟಿದನೆಂದೂ "ತಸ್ಮಾತ್ತ್ರ್ಯಕ್ಷ ಶೂಲಪಾಣಿಃ ಪುರುಷೋಜಾಯತ" (ಸುಬಾ ಉ) ಎಂದರೆ ಆ ಚತುರ್ಮುಖನಿಂದ ತ್ರಿನೇತ್ರನೂ ಶೂಲಪಾಣಿಯೂ ಆದ ರುದ್ರನು ಹುಟ್ಟಿದನು ಎಂದು ಹೇಳಿದೆ.

(5) ಇದೇ ವಿಷಯದಲ್ಲಿ ಸುಪರ್ಣ ವೈಕುಂಠಸಂವಾದದಲ್ಲಿ "ಯತ್ತತ್ಪದ್ಮಮಭೂತ್ಪೂರ್ವಂ ತತ್ರಬ್ರಹ್ಮಾವ್ಯಜಾಯತ । ಬ್ರಹ್ಮಣಶ್ಚಾಪಿ ಸಂಭೂತಶ್ಶಿವ ಇತ್ಯವಧಾರ್ಯತಾಂ । ಶಿವಸ್ಕಂದಸಮುದ್ಭೂತಃ । ಏತತ್ಸೃಷ್ಟಿ ಚತುಷ್ಟಯಂ ॥ (ಇತಿಹಾಸ ಸಮುಚ್ಚಯೇ) ಎಂಬದಾಗಿ ಶ್ರೀಮನ್ನಾರಾಯಣನ ನಾಭೀಕಮಲದಿಂದ ಚತುರ್ಮುಖನೂ, ಚತುರ್ಮುಖನಿಂದ ಶಿವನೂ, ಶಿವನಿಂದ ಸ್ಕಂದನೂ ಜನಿಸಿದರು ಎಂದು ಹೇಳಿರುವುದು.

(6) ಭಾಗವತ ಪುರಾಣದಲ್ಲಿ ಚತುರ್ಮುಖನಿಂದ ದೇವಾದಿ ಸೃಷ್ಟಿಯನ್ನು ವಿವರಿಸಿರುವ ಕಡೆಯಲ್ಲಿ ಈ ರೀತಿಯಾಗಿ ಹೇಳಿದೆ— ಚತುರ್ಮುಖ ಬ್ರಹ್ಮನು ಸನಕಾದಿ ಋಷಿಗಳನ್ನು ಸೃಷ್ಟಿಸಿದಾಗ ಅವರು ತನ್ನ ಆಜ್ಞೆಯ ಪ್ರಕಾರವಾಗಿ ಪ್ರಜಾಭಿವೃದ್ಧಿ

ಕಾರ್ಯವನ್ನು ನಡೆಸದೆ ವಿರಕ್ತಿಮಾರ್ಗವನ್ನು ಅವಲಂಬಿಸಿದುದನ್ನು ನೋಡಿ ಬ್ರಹ್ಮನಿಗೆ ವಿಪರೀತವಾಗಿ ಕೋಪವುಂಟಾಯಿತೆಂದೂ ಆ ಕೋಪವೇ ರುದ್ರರೂಪವಾಗಿ ಅವತರಿಸಿತೆಂದೂ

ಭ್ರುಕುಟೀ ಕುಟಿಲಾತ್ತಸ್ಯ । ಲಲಾಟಾತ್ ಕ್ರೋಧದೀಪಿತಾತ್ ।
ಸಮುತ್ಪನ್ನಸ್ತಧಾರುದ್ರೋ । ಮಧ್ಯಾಹ್ನಾರ್ಕಸಮಃಪ್ರಭಃ ।
ಅರ್ಧನಾರೀನರವಪುಃ । ಪ್ರಚಂಡಾದಿಶರೀರವಾ್ ॥

ಎಂಬ ಶ್ಲೋಕದಿಂದಲೂ ಈ ವಿಶಯುವು ವ್ಯಕ್ತವಾಗುವುದು.

(7) ಅದೂಅಲ್ಲದೆ ಪಂಚಮ ವೇದವಾದ ಮಹಾಭಾರತದಲ್ಲಿ ರುದ್ರನು ಮಹರ್ಷಿಗಳನ್ನು ಕುರಿತು ಅವರ ಇಷ್ಟಪ್ರಾಪ್ತಿಗೂ ಮತ್ತು ಅನಿಷ್ಟ ನಿವೃತ್ತಿಗೂ ಶ್ರೀಮನ್ನಾರಾಯಣನೇ ಗತಿಯೆಂದು ಹೇಳಿರುವನು (ಹರಿವಂಶದ ೫೭ ನೇ ಅಧ್ಯಾಯದಲ್ಲಿ)

ಹರಿರೇಕಸದಾಧ್ಯೇಯೋ । ಭವದ್ಭಿಸ್ಸತ್ವಸಂಸ್ಥಿತೈಃ ।
ಓಮಿತ್ಯೇವಸದಾವಿಪ್ರಾಃ । ಪಠಧ್ವಂಧ್ಯಾತಕೇಶವಂ ।
ತತೋವಃಶ್ರೇಯಸಃಪ್ರಾಪ್ತಿ । ರ್ಭವಿಷ್ಯತಿನಸಂಶಯಃ ॥
ಏವಂಧ್ಯಾತೋಹರಿಸ್ಸಾಕ್ಷಾತ್ । ಪ್ರಸನ್ನೋವೋಭವಿಷ್ಯತಿ ।
ಭವನಾಶಮಯಂದೇವಃ । ಕರಿಷ್ಯತಿನಸಂಶಯಃ ॥

ಎಂದರೆ— ಸಾತ್ವಿಕರಾದ ವಿಪ್ರರೆಲ್ಲರೂ ಹರಿಯನ್ನೇ ಧ್ಯಾನಿಸಬೇಕು. ಆ ಕೇಶವನ ಧ್ಯಾನದಿಂದಲೇ ಉತ್ತರೋತ್ತರ ಶ್ರೇಯಸ್ಸೂ, ಅವನ ಅನುಗ್ರಹವೂ ಮತ್ತು ಅಂತ್ಯದಲ್ಲಿ ಮೋಕ್ಷವೂ ಲಭಿಸುವುವು ಇದರಲ್ಲಿ ಸಂಶಯವಿಲ್ಲ ಎಂದು ರುದ್ರನೇ ಹೇಳಿರುವನು

ಇತ್ಯಾದಿ ಅನೇಕ ಶಾಸ್ತ್ರ ವಚನಗಳ ಆಧಾರದಿಂದ ರುದ್ರನು ಚತುರ್ಮುಖ ಬ್ರಹ್ಮನಿಂದ ಹುಟ್ಟಿದವನೆಂದೂ ಶ್ರೀಮನ್ನಾರಾಯಣನೇ ಪರತತ್ತ್ವವೆಂದೂ ಸ್ಥಿರಪಡುವುದರಿಂದ ತಾಮಸಪುರಾಣವಾದ ಲಿಂಗಪುರಾಣವು ಪ್ರಧಾನವಲ್ಲವೆಂದು ತಿಳಿಯಬೇಕು.

## ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಹೇಳಿರುವ ರುದ್ರ, ಇಂದ್ರ, ಆಕಾಶ, ಪ್ರಾಣ ಇವುಗಳ ಪರತ್ವದ ವಿಚಾರ :

ಆದರೆ ಶ್ರುತೀತಿಹಾಸಗಳಲ್ಲಿ ಅಲ್ಲಲ್ಲಿ

" ನಸನ್ನಚಾಸಚ್ಛಿವ ಏವಕೇವಲಃ " (ಅರ್ಥರ್ವಶಿಖೆ)
" ಏಕಏವರುದ್ರಃ " (ಯಜು. ಕಾ. ೧-೮)
" ಸರ್ವೈಶ್ವರ್ಯ ಸಮುತ್ಪನ್ನಶ್ಶಂಭುರಾಕಾಶ ಮಧ್ಯೇಧ್ಯೇಯಃ "
(ವಿ. ಪು. ೧-೯-೮೫)

ಇತ್ಯಾದಿ ವಚನಗಳು ರುದ್ರನನ್ನು ಪರತತ್ತ್ವವನ್ನಾಗಿ ನಿರ್ದೇಶಿಸಿ ಅವನನ್ನು ಉಪಾಸ್ಯದೈವವನ್ನಾಗಿ ಹೇಳಿರುವುದಲ್ಲಾ ಎಂದು ಕೇಳಬಹುದು.

ರುದ್ರನು ಪರತತ್ತ್ವವು ಎಂದು ಎಲ್ಲೋ ಒಂದುಕಡೆ ಹೇಳಿರುವ ವಚನವನ್ನು ಅವಿರೋಧವಾದ ವಿಷ್ಣುಪಾರಮ್ಯ ವಚನಗಳು ಅಸಂಖ್ಯಾತಗಳಾಗಿರುವುದರಿಂದ ವಿರೋಧಾಧಿಕರಣನ್ಯಾಯದಿಂದ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅದೂ ಅಲ್ಲದೆ ನಾರಾಯಣೋಪನಿಷತ್ತಿನಲ್ಲಿ "ಅಥನಿತ್ಯೋನಾರಾಯಣಃ । ಬ್ರಹ್ಮಾನಾರಾಯಣಃ । ಶಿವಶ್ಚನಾರಾಯಣಃ । ಶಕ್ರಶ್ಚನಾರಾಯಣಃ ।" ಎಂಬದಾಗಿ ನಾರಾಯಣನನ್ನೇ ಬ್ರಹ್ಮರುದ್ರೇಂದ್ರಾದಿ ಸ್ವರೂಪನನ್ನಾಗಿ ಹೇಳಿರುವುದರಿಂದ ಇಲ್ಲಿಹೇಳಿರುವ ಶಿವ, ರುದ್ರ, ಶಂಭು ಇತ್ಯಾದಿ ನಾಮಗಳು ನಾರಾಯಣನಿಗೇ ಅನ್ವಯಿಸುವುವು. ವಿಷ್ಣುಸಹಸ್ರ ನಾಮಾಧ್ಯಾಯದಲ್ಲಿ ಶಿವ, ಶಂಭು, ರುದ್ರ ಈಶಾನ, ಈಶ್ವರ ಇತ್ಯಾದಿ ನಾಮ-ಗಳೆಲ್ಲವೂ ನಾರಾಯಣನಿಗೇ ಹೇಳಿರುವುದರಿಂದ ಈ ಹೆಸರುಗಳೆಲ್ಲವೂ ನಾರಾಯಣನಿಗೇ ಅನ್ವಯಿಸುವುವು. ಅದೂಅಲ್ಲದೆ "ನಾರಾಯಣ" ಎಂಬ ಪದವು ರುದ್ರನಿಗೆ ಎಲ್ಲಿಯೂ ಯಾವ ಕಾಲದಲ್ಲಿಯೂ ಅನ್ವಯಿಸುವುದಿಲ್ಲ. ಇದೇ ರೀತಿಯಲ್ಲಿ—

"ಸರ್ವಂತದಿಂದ್ರತೇವಶೇ" (ಸಾಮವೇದ) "ತಸ್ಮಾದಿಂದ್ರ ಉತ್ತರಃ" "ನಕಿರಿಂದ್ರತ್ವದುತ್ತರಃ" (ಋಗ್ವೇದ), "ಇಂದ್ರೋಮಾಯಾಭಿಃ ಪುರುರೂಪಈಯತೇ" (ಬ್ರ.ಉ. ೪-೫) "ಸರ್ವಾಣಿಹವಾ ಇಮಾನಿ ಭೂತಾನಿ ಪ್ರಾಣಮೇವಾಭಿ ಸಂವಿಶಂತಿ । ಪ್ರಾಣಮಭ್ಯುಜ್ಜಿಹತೇ" (ಛಾಂ.ಉ) "ಆಕಾಶೋಹವೈ ನಾಮರೂಪೋ ನಿರ್ವಹಿತಾ" (ಛಾಂ. ಉ ೮-೧-೧)

ಇತ್ಯಾದಿ ಮಂತ್ರಗಳಲ್ಲಿ ಇಂದ್ರ, ಪ್ರಾಣ, ಆಕಾಶ ಇತ್ಯಾದಿಗಳು ಉಪಾಸ್ಯಗಳೆಂದು ಹೇಳಿ ಅಯಾ ದೇವತಾದಿಗಳನ್ನು ಪರತ್ವಸ್ಥಾನದಲ್ಲಿ ಸೂಚಿಸಿರುವಂತೆ ಕಾಣುತ್ತದೆ ಆದರೆ ಬ್ರಹ್ಮಸೂತ್ರದಲ್ಲಿ ಇಂದ್ರ ಪ್ರಾಣ, ಆಕಾಶಾದಿ ಸಕಲ ಶಬ್ದಗಳೂ ಪರಬ್ರಹ್ಮ ವಾಚಕಗಳೆಂದು ನಿರ್ಧರಿಸಿದ್ದಾರೆ.

ಆಕಾಶಾತ್ಪತಿತಂ ತೋಯಂ । ಯಥಾಗಚ್ಛತಿ ಸಾಗರಂ ॥
ಸರ್ವದೇವ ನಮಸ್ಕಾರಃ । ಕೇಶವಂಪ್ರತಿಗಚ್ಛತಿ ॥

ಎಂಬ ಶ್ಲೋಕರೀತ್ಯಾ ಆಯಾ ದೇವತೆಗಳಿಗೆ ನಮಸ್ಕರಿಸಿದಾಗ್ಯೂ ತದಂತರ್ಯಾಮಿಯಾದ ಪರಮಾತ್ಮನಿಗೇ ಆ ನಮಸ್ಕಾರಗಳು ಸೇರುತ್ತವೆ. ಭಗವದ್ಗೀತೆಯಲ್ಲಿ ಈ ವಿಷಯದಲ್ಲಿ—

ಯೋಯೋಯಾಂಯಾಂ ತನುಂಭಕ್ತಃ । ಶ್ರದ್ಧಯಾರ್ಚಿತುಮಿಚ್ಛತಿ ।
ತಸ್ಯತಸ್ಯಾಚಲಾಂಶ್ರದ್ಧಾಂ । ತಾಮೇವವಿದಧಾಮ್ಯಹಂ ॥ (ಗೀ. ೭–೨೧)

ಸತತಂಶ್ರದ್ಧಯಾಯುಕ್ತ । ಸ್ತಸ್ಯಾರಾಧನಮೀಹತೇ ।
ಲಭತೇಚತತಃಕಾಮಾ । ನ್ಮಯೈವವಿಹಿತಾನ್ಹಿತಾನ್ ॥ (ಗೀ. ೭-೨೨)

ಅಂತವತ್ತುಫಲಂ ತೇಷಾಂ । ತದ್ಭವತ್ಯಲ್ಪಮೇಧಸಾಂ ।
ದೇವಾನ್‌ದೇವಯಜೋಯಾಂತಿ । ಮದ್ಭಕ್ತಾಯಾಂತಿ ಮಾಮಪಿ ॥
(ಗೀ ೭-೨೩)

ಎಂದು ಶ್ರೀ ಕೃಷ್ಣನು—ಚರಾಚರಗಳಲ್ಲೆಲ್ಲಾ ನಾನು ಅಂತರ್ಯಾಮಿಯಾಗಿರುವುದ ರಿಂದ ಸಮಸ್ತ ವಿಧವಾದ ಆರಾಧನೆಗಳೂ ನನ್ನನ್ನೇ ಸೇರುತ್ತವೆ. ಉಪಾಸಕರು ಕಾಮ್ಯಫಲಾಪೇಕ್ಷೆಯಿಂದ ಆಯಾಯ ದೇವತೆಗಳನ್ನು ಆರಾಧಿಸಿದರೆ, ನನ್ನ ಅನುಗ್ರಹ ದಿಂದಲೇ, ಆಯಾಯ ದೇವತೆಗಳ ಲೋಕವನ್ನೇ ಸೇರುವರು ಫಲಾಪೇಕ್ಷಾ ರಹಿತರಾಗಿ ಆಯಾ ದೇವತೆಗಳಲ್ಲಿ ಅಂತರ್ಯಾಮಿಯಾಗಿರುವ ನನ್ನನ್ನೇ ಭಜಿಸಿದವರಿಗೆ ನನ್ನ ಅನುಗ್ರಹದಿಂದ ಶಾಶ್ವತಾನಂದರೂಪವಾದ ಮೋಕ್ಷವು ದೊರಕುವುದು ಎಂಬದಾಗಿ ಹೇಳಿರುವನು.

**ಪರಬ್ರಹ್ಮನ ಶರೀರ ಶರೀರಿ ಭಾವವು :**

ಈ ಸಂದರ್ಭದಲ್ಲಿ ಪರಬ್ರಹ್ಮನಾದ ಶ್ರೀಮನ್ನಾರಾಯಣನಿಗೂ ಈ ಪ್ರಪಂಚ-ದಲ್ಲಿರುವ ಚೇತನಾ ಚೇತನ ವಸ್ತುಗಳಿಗೂ ಇರುವ ಶರೀರ ಶರೀರಿ ಸಂಬಂಧವನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕವು ಸಕಲ ಪ್ರಾಣಿಗಳ ಆತ್ಮರುಗಳಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿರುವುದರಿಂದ ನಾಮರೂಪಗಳಿಂದ ತೋರಿಬರುವ ಸಮಸ್ತ ಪ್ರಾಣಿಗಳೂ ಪರಮಾತ್ಮನ ಶರೀರಗಳೆನಿಸುವವು ಒಬ್ಬ ವ್ಯಕ್ತಿಯ ಹೆಸರನ್ನು ಹಿಡಿದು ಕರೆದರೆ ಆ ಹೆಸರು ಮೊದಲು ಆ ವ್ಯಕ್ತಿಯ ಶರೀರಕ್ಕೂ, ನಂತರ ಅದರಲ್ಲಿರುವ ಆತ್ಮಕ್ಕೂ ಮತ್ತು ಮೂರನೆಯದಾಗಿ ಆ ಆತ್ಮದಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನಿಗೂ ಅನ್ವಯಿಸುವುದು ಚೇತನಾಚೇತನ ವಸ್ತುಗಳಿಗೂ ಪರಬ್ರಹ್ಮನಿಗೂ ಇರುವ ಈ ಶರೀರ ಶರೀರಿಭಾವವನ್ನು ವೇದಾಂತಗಳು ಸಮರ್ಥಿಸುವವು ಬೃಹದಾರಣ್ಯ ಕೋಪನಿಷತ್ತಿನ ಮೂರನೆಯ ಅಧ್ಯಾಯದಲ್ಲಿ—

ಯಆತ್ಮನಿತಿಷ್ಠನ್ನಾತ್ಮನೋ । ನ್ತರೋಯಮಾತ್ಮಾನವೇದ। ಯಸ್ಯಾತ್ಮಾಶರೀರಂ ।
ಯಆತ್ಮಾನಮಂತರೋಯಮಯತಿ। ಸತಆತ್ಮಾ । ನ್ತರ್ಯಾಮ್ಯಮೃತಂ ॥
(ಬೃ ಉ. ೫-೭-೨೨)

ಎಂದರೆ, ಯಾರು ಆತ್ಮನಲ್ಲಿ ಅಂತರ್ಯಾಮಿಯಾಗಿ ಆ ಆತ್ಮನಿಗೆ ಆಧಾರವಾಗಿರುವನೋ ಮತ್ತು ಯಾವನನ್ನು ಆತ್ಮನೂ ಅರಿಯಲಾರನೋ, ಯಾವನಿಗೆ ಆತ್ಮವು ಶರೀರವೋ ಆವನೇ ಪರಮಾತ್ಮನು. ಇದೇರೀತಿಯಲ್ಲಿ "ಯಸ್ಯಪೃಥಿವೀಶರೀರಂ" "ಯಸ್ಯವಾಯು ಶ್ಶರೀರಂ" "ಯಸ್ಯಾಕಾಶಶ್ಶರೀರಂ" "ಯಸ್ಯಪ್ರಾಣಶರೀರಂ" "ಯಸ್ಯಾದಿತ್ಯಶರೀರಂ"

ಇತ್ಯಾದಿಯಾಗಿ ವೇದಾನ್ತ ಪ್ರಮಾಣದಿಂದ ಒಂದೊಂದೂ ಪರಮಾತ್ಮನ ಶರೀರವಾಗುವುದು. ತೈತ್ತಿರಿಯೋಪನಿಷತ್ತಿನಲ್ಲಿ 'ಅಂಗಾನ್ಯನ್ಯಾ ದೇವತಾಃ' (ತೈ. ಶೀಕ್ಷಾವಲ್ಲಿ) "ತಾನಿಸರ್ವಾಣಿತದ್ವಪುಃ" ಎಂದು ಸಮರ್ಥಿಸಿರುವುದು. "ಜಗತ್ಸರ್ವಂ ಶರೀರಂತೇ" (ರಾ.ಯು) ಎಂದು ಶ್ರೀಮದ್ರಾಮಾಯಣದಲ್ಲಿ ಹೇಳಿರುವುದು. ಇದರಿಂದ ಮೇಲೆ ಹೇಳಿದ ಶರೀರ ಶರೀರಿಭಾವವು ಸಿದ್ಧಿಸುವುದು ವಿಶಿಷ್ಟಾದ್ವೈತಸಿದ್ಧಾನ್ತದಲ್ಲಿ ಈ ಶರೀರಶರೀರಿ ಸಂಬಂಧವು ಮುಖ್ಯವಾಗಿ ಗಮನಿಸಬೇಕಾದ ಅಂಶವು

ಉಪನಿಷತ್ತಿನಲ್ಲಿ "ಸದೇವ ಸೋಮ್ಯೇ ದಮಗ್ರ ಆಸೀತ್" "ಎಂದು ಸೃಷ್ಟಿಗೆ ಮೊದಲು ಪರಬ್ರಹ್ಮನೊಬ್ಬನೇ ಮೊಟ್ಟಮೊದಲು ಇದ್ದನೆಂದೂ "ತದೈಕ್ಷತಬಹುಸ್ಯಾಂ" ಎಂದರೆ ತಾನು ಬಹುವಾಗಿ ಆಗುವೆನು ಎಂದು ಸಂಕಲ್ಪಿಸಿದನೆಂದೂ; ಅದಕ್ಕಾಗಿ "ಅನೇನಜೀವೇನಾತ್ಮನಾ ನುಪ್ರವಿಶ್ಯ ನಾಮರೂಪೇವ್ಯಾಕರವಾಣಿ" ಎಂದರೆ ಚಿದ ಚಿತ್ತುಗಳಲ್ಲಿ ಅಂತರ್ಯಾಮಿಯಾಗಿ ಅವುಗಳಿಗೆ ಆತ್ಮರೂಪದಿಂದ ಪ್ರವೇಶಿಸಿ ನಾಮ ರೂಪಾತ್ಮಕವಾದ ಈ ಪ್ರಪಂಚವನ್ನು ಸೃಷ್ಟಿಸಿದನೆಂದು ಹೇಳಿರುವುದರಿಂದ ಸಮಸ್ತಕ್ಕೂ ಪರಬ್ರಹ್ಮನು ಆತ್ಮನೆಂದೂ ಚಿದಚಿತ್ತುಗಳೆಲ್ಲವೂ ಅವನ ಶರೀರವೆಂದೂ ಗ್ರಹಿಸಬೇಕು.

**ನಾರಾಯಣನಿಗೆ ಉತ್ಪತ್ತಿಯುಂಟೆಂದು ಅಲ್ಲಲ್ಲಿಹೇಳಿರುವ ವಾಕ್ಯಗಳಿಗೆ ಅರ್ಥ :**

ಆದರೆ " ಬ್ರಹ್ಮವಿಷ್ಣುರುದ್ರೇಂದ್ರಾಸ್ತೇಸಂಪ್ರಸೂಯಂತೇ " ಎಂಬ ಮಂತ್ರದಲ್ಲಿ ಬಹ್ಮವಿಷ್ಣುರುದ್ರೇಂದ್ರರು ಹುಟ್ಟುತ್ತಾರೆ, ಎಂದು ಹೇಳಿರುವುದರಿಂದ ವಿಷ್ಣುವಿಗೂ ಬಹ್ಮರುದ್ರಾದಿಗಳಂತೆ ಜನ್ಮವು ಹೇಳಿರುವುದಲ್ಲಾ ಎಂದು ಪ್ರಶ್ನಿಸಬಹುದು. ಆದರೆ ಜನ್ಮವು ಬಹ್ಮರುದ್ರೇಂದ್ರಾದಿಗಳಿಗೆ ಕರ್ಮ ಕೃತವಾಗಿಯೂ ವಿಷ್ಣುವಿಗೆ ಅವನ ಸ್ವೇಚ್ಛೆಯಿಂದ ಲೀಲಾ ರೂಪವಾಗಿಯೂ ಆಗುವುದೆಂಬ ವಿಷಯವು ಬೇರೆ ಅನೇಕ ಪ್ರಮಾಣಗಳಿಂದ ಸ್ಥಿರಪಡುವುದು. " ಅಜಾಯಮಾನೋ ಬಹುಧಾವಿಜಾಯತೆ " (ಪು. ಸೂ.) ಎಂದರೆ ಹುಟ್ಟೇ ಇಲ್ಲದವನು ಬಹುವಾಗಿ ಹುಟ್ಟುತ್ತಾನೆ; ಎಂದರೆ ತೋರುತ್ತಾನೆ ಎಂದು ಪುರುಷ ಸೂಕ್ತದಲ್ಲಿ ಹೇಳಿರುವುದು. ಭಗವದ್ಗೀತೆಯಲ್ಲಿ "ಪರಿತ್ರಾಣಾಯಸಾಧೂನಾಂ ವಿನಾಶಾಯಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ॥ (ಭ. ಗೀ. ೪-೮) ಎಂದು ಸಾಧುಗಳನ್ನು ಉದ್ಧರಿಸುವುದಕ್ಕಾಗಿಯೂ ದುಷ್ಟರನ್ನು ನಾಶಮಾಡುವುದಕ್ಕಾಗಿಯೂ ಮತ್ತು ಧರ್ಮವನ್ನು ಸಂರಕ್ಷಿಸಿ ಸ್ಥಾಪಿಸುವುದಕ್ಕಾಗಿಯೂ ಪ್ರತಿಯುಗದಲ್ಲಿಯೂ ನಾನೇ ಆವಿರ್ಭವಿಸುತ್ತೇನೆ ಎಂದು ಶ್ರೀಕೃಷ್ಣನು ತಾನೇ ಹೇಳಿರುವನು.

ಲಿಂಗಪುರಾಣದಲ್ಲಿಯೂ ಎರಡನೆಯ ಅಧ್ಯಾಯದಲ್ಲಿ "ಸರ್ವಾವಸ್ಥಾಸು ವಿಷ್ಣೋಃ ಜನನಂ ಸ್ವೇಚ್ಛಯೈವತು" ಎಂದರೆ ಶ್ರೀ ಮಹಾವಿಷ್ಣುವಿನ ಜನನವೆಂಬುವುದು

ಯೋವಾಗ್ಯೋ ಅವನ ಸ್ವೇಚ್ಛೆಯಿಂದಲೇ ಉಂಟಾಗುವುದು ಎಂದೂ "ಲೀಲ ಯಾ ಚ್ಛೈವ ಕೃಷ್ಣಸ್ಯಸ್ವಕುಲಸ್ಯಚ ಸಂಸ್ಮೃತಿಃ। ಜರಕಾಸ್ತ್ರಚ್ಛಲೇನ್ಸೈವ ಸ್ವೇಚ್ಛೆಯಾಗಮನಂ ಹರೇಃ।" ಎಂದು ವಿಷ್ಣುವಿನ ಜನನವು ಅವನ ಸ್ವೇಚ್ಛೆಯಿಂದಲೇ ಅವನ ಲೀಲಾರ್ಥ ವಾಗಿಯೇ ಉಂಟಾಗುವುದು, ಎಂದು ಹೇಳಿರುವುದು.

ಆದರೆ ಋಷಿಗಳ ಶಾಪದಿಂದ ವಿಷ್ಣುವು ಭೂಲೋಕದಲ್ಲಿ ಹುಟ್ಟುವುದಾಗಿ ಕೆಲವು ಕಡೆಗಳಲ್ಲಿ ಹೇಳಿರುವುದಲ್ಲಾ ಎಂದರೆ ಆ ದ್ವಿಜ ಶಾಪವೂ ಕೇವಲ ನಿಮಿತ್ತ ಮಾತ್ರವು; ಕೇವಲ ಭಗವತ್ಸಂಕಲ್ಪ ಮತ್ತು ಅವನ ಲೀಲೆಗಳೇ ಅವನ ಅವತಾರಗಳಿಗೆ ಕಾರಣವು ಎಂದು ಇದೇ ಲಿಂಗಪುರಾಣದ ಎರಡನೆ ಅಧ್ಯಾಯದಲ್ಲಿ ಈ ರೀತಿಯಾಗಿ ಹೇಳಿರುವುದು, "ದ್ವಿಜಶಾಪಚ್ಛಲೇನ್ಸೈವ ಮಅವತೀರ್ಣೋರ್ಪಿಲೀಲಯಾ" ಎಂಬ ಶ್ಲೋಕದಿಂದ ವ್ಯಕ್ತ ವಾಗವುದು

ಈ ಮೇಲಿನ ಪ್ರಮಾಣಗಳಿಂದ ಪರಬ್ರಹ್ಮನಾದ ಶ್ರೀಮನ್ನಾರಾಯಣನ ಅವತಾರ ಗಳು ಅವನ ಸ್ವೇಚ್ಛೆಯಿಂದಲೂ ಇತರ ದೇವಮನುಷ್ಯಾದಿಗಳ ಜನ್ಮಗಳೆಲ್ಲವೂ ಕರ್ಮಾ ಧೀನವಾಗಿಯೂ ಆಗುವುವು ಎಂದು ತಿಳಿಯಬೇಕು.

## ನಾರಾಯಣನು ರುದ್ರನನ್ನು ಸ್ತೋತ್ರ ಮಾಡಿದ ವಿಚಾರ :

ಆದರೆ ಸರ್ವಸೇವ್ಯನಾದ ವಿಷ್ಣುವು ತಾನು ಕೈಲಾಸಕ್ಕೆ ಹೋಗಿದ್ದಾಗ ತನ್ನಿಂದಲೇ ಸೃಷ್ಟಿಸಲ್ಪಟ್ಟ ರುದ್ರನಿಗೆ ಸ್ತೋತ್ರಪ್ರಮಾಣಾದಿಗಳನ್ನು ಮಾಡಿದಂತೆ ವರಾಹ ಪುರಾಣ ದಲ್ಲಿ ಒಂದು ಕಡೆ ಹೇಳಿರುವುದಲ್ಲಾ ಇದು ಹೇಗೆ ಸಮಂಜಸವಾಗುವುದು ? ಎಂದು ಕೇಳಬಹುದು ಈ ಸಂದರ್ಭವು ವರಾಹ ಪುರಾಣದಲ್ಲಿ ವಿಷ್ಣುವು ರುದ್ರನನ್ನು ಮೋಹ ಶಾಸ್ತ್ರಪ್ರವರ್ತಕನನ್ನಾಗಿ ಪ್ರೇರೇಪಿಸುವ ಕಾಲದಲ್ಲಿ ಕಾಣಲ್ಪಡುತ್ತದೆ. ಈ ಬ್ರಹ್ಮಾಂಡ ದಲ್ಲಿ ಸ್ವರ್ಗ ಮತ್ತು ಇತರ ಆನಂದಾನುಭವ ಲೋಕಗಳನ್ನೂ ಮತ್ತು ನರಕಾದಿ ದುಃಖಾ ನುಭವ ಸ್ಥಾನಗಳನ್ನೂ ಸೃಷ್ಟಿಸಿ, ತತ್ತ್ವಜ್ಞಾನಿಗಳಾದ ಮುಮುಕ್ಷುಗಳಿಗಾಗಿ ವೈಕುಂಠ ವನ್ನೂ ಸೃಷ್ಟಿಸಿ ಮೋಕ್ಷಪ್ರದತ್ವಕ್ಕೆ ತಾನೇ ಅಧಿಪತಿಯಾಗಿ ನಿಂತನು ಸ್ವರ್ಗನರಕಾದಿ ಗಳಿಗೂ ಅನೇಕರು ಬೇಕಾದ್ದರಿಂದ "ಮೋಹಶಾಸ್ತ್ರ" ವನ್ನು ಪ್ರಪಂಚದಲ್ಲಿ ಪ್ರಚುರ ಪಡಿಸುವುದಕ್ಕಾಗಿ ರುದ್ರನನ್ನು ಪ್ರೋತ್ಸಾಹಿಸುವ ಕಾಲದಲ್ಲಿ ಅವನನ್ನು ಸ್ತುತಿ ಸಿದುದಾಗಿ ಹೇಳಿದೆ.

(ವರಾಹೇ 71) "ತ್ವಂಹಿರುದ್ರಮಹಾ ಬಾಹೋಮೋಹ ಶಾಸ್ತ್ರಾಣಿಕಾರಯ" ಎಂದು ರುದ್ರನನ್ನು ಪ್ರೇರೇಪಿಸಿ ಅವನನ್ನು ಮೋಹ ಶಾಸ್ತ್ರ ಪ್ರೇರೇಪಕನನ್ನಾಗಿಯೂ ಮತ್ತು ಆ ರುದ್ರನಿಂದ ಪ್ರತಿಪಾದಿತವಾದ ಮೋಹ ಶಾಸ್ತ್ರವನ್ನು ತಾಮಸಗೋಷ್ಠಿಯವ ಆಚರಣೆಗಾಗಿಯೂ ಮಾಡುವುದಕ್ಕಾಗಿ ಅವನನ್ನು ಸ್ತುತಿಸಿ ಪ್ರೇರೇಪಿಸಿದಂತೆ ವರಾಹ ಪುರಾಣದಲ್ಲಿ ಹೇಳಿದೆ.

ಅವಾಪ್ತ ಸಮಸ್ತಕಾಮನಾಗಿಯೂ, ಪುರುಷೋತ್ತಮನಾಗಿಯೂ, ಸರ್ವಫಲ ಪ್ರದನಾಗಿಯೂ ಇರುವ ಶ್ರೀಮನ್ನಾರಾಯಣನಿಗೆ "ಸ್ತ್ರೀಪ್ರಾಯ ಮಖಿಲಂಜಗತ್" ಎಂಬ ಶಾಸ್ತ್ರವಾಕ್ಯ ಪ್ರಕಾರ ಬ್ರಹ್ಮರುದ್ರಾದಿಗಳೆಲ್ಲಾ ತನಗೆ ಸ್ತ್ರೀಪ್ರಾಯರಾದುದರಿಂದ ಈ ಸ್ತೋತ್ರವು ಪುರುಷೋತ್ತಮತ್ವಪ್ರಯುಕ್ತವಾದ ಪ್ರಣಯಲೀಲಾವಿಷಯವಾಗಿಯೂ ಆಗಬಹುದು.

ಈ ಮೋಹ ಶಾಸ್ತ್ರದ ವಿಷಯವು ಎಲ್ಲಿ ಹೇಳಿರುವುದೆಂದರೆ (ವರಾಹಪು. 71ನೇ ಅಧ್ಯಾಯ) "ತ್ವಂಚರುದ್ರ ಮಹಾಬಾಹೋ ಮೋಹ ಶಾಸ್ತ್ರಾಣಿ ಕಾರಯ। ಅಲ್ಪಾಯಾಸಂ ದರ್ಶಯಿತ್ವಾ। ಫಲಂ ಶೀಘ್ರಂ ಪ್ರದರ್ಶಯ॥ ಎಂದರೆ ಎಲೈ ಮಹಾನುಭಾವನಾದ ರುದ್ರನೇ! ನೀನು ಮೋಹಶಾಸ್ತ್ರವನ್ನು ಪ್ರಚಾರ ಮಾಡು ಮತ್ತು ಅದನ್ನು ಅನುಷ್ಠಿಸುವವರಿಗೆ ಶೀಘ್ರದಲ್ಲಿಯೇ ಫಲವನ್ನು ಅನುಗ್ರಹಿಸು.

ಕೂರ್ಮ ಪುರಾಣದಲ್ಲಿ ಈರೀತಿಯಾಗಿ ಹೇಳಿರುವುದು "ಏವಂ ಸಂಚೋದಿತೋರುದ್ರೋ ಮಾಧವೇನ ಮುರಾರಿಣಾ। ಚಕಾರ ಮೋಹ ಶಾಸ್ತ್ರಾಣಿ ಕೇಶವೇನ ಶಿವೋರ್ಥಿತಃ॥ ಎಂದರೆ ಶ್ರೀಮನ್ನಾರಾಯಣನಿಂದ ಈರೀತಿಯಾಗಿ ಪ್ರೇರೇಪಿಸಲ್ಪಟ್ಟ ರುದ್ರನು ಮೋಹಶಾಸ್ತ್ರವನ್ನು ಪ್ರಚಾರ ಪಡಿಸಿದನು. ರುದ್ರನು ಮೋಹಶಾಸ್ತ್ರವನ್ನು ಪ್ರಚಾರ ಪಡಿಸಿದ ವಿಷಯವು ಪದ್ಮಪುರಾಣದಲಿ ಈರೀತಿಯಾಗಿ ಹೇಳಿದೆ. "ದೇವತಾನಾಂಹಿತಾರ್ಥಾಯ। ವೃತ್ತಿಃಪಾಷಂಡಿನಾಶುಭೇ। ಕಪಾಲ ಕೇಶಭಸ್ಮಾಸ್ಥಿ। ಧಾರಣಂತುಕೃತಂಮಯಾ। ತಾಮಸಾನಿಪುರಾಣಾನಿ। ಯಥೋಕ್ತಂ ವಿಷ್ಣುನಾಮಮ। ಪಾಷಂಡ ಶೈವಶಾಸ್ತ್ರಾಣಿ। ಪ್ರಾಯಶಃ ಕೃತವಾನಹಂ। ವೇದ ಬಾಹ್ಯಾನಿ ಶಾಸ್ತ್ರಾಣಿ। ಸಮ್ಯಗುಕ್ತಂ ಮಯಾ ಽನಘೇ। ಇದಂ ಮತಮವಷ್ಟಭ್ಯ। ಮಾಂದೃಷ್ಟ್ವಾ ಸರ್ವರಾಕ್ಷಸಾಃ। ಭಗವದ್ವಿಮುಖಾಸ್ಸರ್ವೇ। ಬಭೂವುಸ್ತಾಮಸಾಃ ಪುರಾ॥ ಭಸ್ಮಾದಿಭೂಷಣಂ ಕೃತ್ವಾ। ಮೋಹೇನ ತಮಸಾವೃತಾಃ। ಮಾಮೇವಾ ಪೂಜಯನ್ಸರ್ವೇ। ಮಾಂಸಾಸೃಕ್ ಚಂದನಾದಿಭಿಃ। ಮತ್ತೋವರ ಪ್ರಸಾದಾನಿ। ಲಬ್ಧ್ವಾಮದ ಬಲೋದ್ಧತಾಃ। ಅತ್ಯಂತ ವಿಷಯಾಸಕ್ತಾಃ। ಕಾಮ ಕ್ರೋಧ ಮದಾನ್ವಿತಾಃ। ಸತ್ಯಹೀನಾಸ್ತು ನಿರ್ವೀರ್ಯಾಃ। ಜಿತಾದೇವಗಣೈಸ್ತಥಾ॥ ಸರ್ವಧರ್ಮ ಪರಿಭ್ರಷ್ಟಾಃ। ಕಾಲೇಯಾಂತ್ಯಧಮಾಂಗತಿಂ। ಏವಂ ದೇವ ಹಿತಾರ್ಥಾಯ। ವೃತ್ತಿಂ ವೇದವಿಗರ್ಹಿತಾಂ। ವಿಷ್ಣೋರಾಜ್ಞಾಂ ಪುರಸ್ಕೃತ್ಯ ಕೃತಂ ಭಸ್ಮಾದಿಧಾರಣಂ। ಬಾಹ್ಯಚಿಹ್ನ ಮಿದಂದೇವಿ। ಮೋಹನಾರ್ಥಂ ಸುರದ್ವಿಷಾಂ। ಎಂದರೆ ಎಲೈ ಪಾರ್ವತಿಯೇ! ದೇವತೆಗಳ ಹಿತಾರ್ಥವಾಗಿ ಕಪಾಲಕೇಶ ಭಸ್ಮಾದಿಗಳನ್ನು ಧರಿಸಿ ಪಾಷಂಡ ವೃತಿಯನ್ನನುಸರಿಸಿ ತಾಮಸ ಪುರಾಣವಾದ ಮೋಹಶಾಸ್ತ್ರವನ್ನು ವಿಷ್ಣುವಿನಿಂದ ಹೇಳಲ್ಪಟ್ಟಂತೆ ನಾನು ಪ್ರಚಾರಮಾಡಿದೆನು. ವೇದಬಾಹ್ಯವಾದ

ಪಾಷಂಡ ಮತ್ತು ಶೈವಶಾಸ್ತ್ರಗಳು ನನ್ನಿಂದಲೇ ಪ್ರಚಾರ ಮಾಡಲ್ಪಟ್ಟವು. ಕನ್ನ ಈ ವೇಷವೃತ್ತಿಗಳನ್ನು ನೋಡಿ ರಾಕ್ಷಸರೆಲ್ಲರೂ ಪಾಷಂಡ ಮತವನ್ನು ಕೈಕೊಂಡು ಭಸ್ಮಾದಿಗಳನ್ನು ಧರಿಸಿ ತಾಮಸ ವೃತ್ತಿಯುಳ್ಳವರಾಗಿ ರಕ್ತಮಾಂಸಗಳೆಂಬ ಚಂದನಾದಿಗಳಿಂದ ನನ್ನನ್ನು ಪೂಜಿಸಿ ತತ್ಫಲವಾಗಿ ನನ್ನ ಅನುಗ್ರಹದಿಂದ ಮದೋನ್ಮತ್ತರಾಗಿಯೂ, ಬಲಗರ್ವಿತರಾಗಿಯೂ, ಆಗಿ ಕೇವಲ ಸಾಂಸಾರಿಕ ವಿಷಯಗಳಲ್ಲಿಯೇ ಅತ್ಯಂತ ಅಭಿರುಚಿಯನ್ನುಳ್ಳವರಾಗಿ, ಸತ್ವಹೀನರಾಗಿ, ಆದರಿಂದ ನಿರ್ವೀರ್ಯರಾಗಿ ದೇವತೆಗಳಿಂದ ಜಯಿಸಲ್ಪಟ್ಟವರಾಗಿ, ಕಾಲಾಂತರದಲ್ಲಿ ಅಧೋಗತಿಯನ್ನು ಹೊಂದಿದರು. ಈ ಕಾರ್ಯವನ್ನು ದೇವತೆಗಳ ಹಿತಕ್ಕಾಗಿ ವಿಷ್ಣುವಿನ ಆಜ್ಞೆಯಿಂದ ಮಾಡಿರುವೆನು.

ಈ ಮೇಲೆ ಹೇಳಿದ ಅನೇಕ ಪ್ರಮಾಣಗಳಿಂದ ರುದ್ರ ಪಾರಮ್ಯ ವಿಷಯವಾಗಿ ಯಾವ ಆಧಾರವೂ ಇಲ್ಲವೆಂದು ವಿವೇಕಿಗಳಾದವರು ತಿಳಿಯಬೇಕು.

ನಾರಾಯಣಪರತ್ವದ ವಿಷಯದಲ್ಲಿ ಶಾಸ್ತ್ರಗಳಲ್ಲಿರುವ ಸಿದ್ಧಾಂತವಾಕ್ಯಗಳು:

ಶ್ರೀಮನ್ನಾರಾಯಣನೇ ಪರತತ್ತ್ವವೆಂಬ ವಿಷಯದಲ್ಲಿ ಅನೇಕ ಕಡೆಗಳಲ್ಲಿ ಶಾಸ್ತ್ರ ಪ್ರಮಾಣಗಳಿವೆ ಅವುಯಾವುವೆಂದರೆ.

**ವೇದಾನ್ತಸ್ಮೃತೀತಿಹಾಸ ಪುರಾಣಗಳ ಆಧಾರ**

**ನಾರಾಯಣಾನುವಾಕದಲ್ಲಿ**

"ನಾರಾಯಣ ಪರಂಬ್ರಹ್ಮ ತತ್ತ್ವಂನಾರಾಯಣಃ ಪರಃ" ಎಂದರೆ,
ಶ್ರೀಮನ್ನಾರಾಯಣನೇ ಪರಬ್ರಹ್ಮನು ಮತ್ತು ಅವನೇ ಪರತತ್ತ್ವವು

**ಶೈವಪುರಾಣದಲ್ಲಿ**

"ವೈಕುಂಠೇತು ಪರೇಲೋಕೇ। ಶ್ರಿಯಾಸಾರ್ಧಂ ಜಗತ್ಪತಿಃ ।
ಆಸ್ತೇವಿಷ್ಣುರ ಚಿಂತ್ಯಾತ್ಮಾ। ಭಕ್ತೈರ್ಭಾಗವತೈಸಹ" ಎಂದು ಹೇಳಿದೆ.

**ಭಗವದ್ಗೀತೆಯಲ್ಲಿ**

"ವೇದೈಶ್ಚಸರ್ವೈರಹಮೇ ವವೇದ್ಯಃ" ಎಂದು ಶ್ರೀಕೃಷ್ಣನು ಹೇಳಿರುವನು

**ಕಠೋಪನಿಷತ್ತಿನಲ್ಲಿ**

"ಸರ್ವೇವೇದಾಯತ್ಪದ ಮಾಮನನ್ತಿ" ಎಂದು ಹೇಳಿರುವುದು.

**ವಿಷ್ಣು ಪುರಾಣದಲ್ಲಿ**

1) "ವಿಷ್ಣೋಸ್ಸಕಾಶಾದುದ್ಭೂತಂ। ಜಗತ್ತತ್ರೈವ ಸಂಸ್ಥಿತಂ ।
ಸ್ಥಿತಿ ಸಂಯಮ ಕರ್ತಾಸೌ । ಜಗತೋಸ್ಯ ಜಗಚ್ಚಸಃ ॥ (೧-೧-೩೧)

2) ಜ್ಞಾತಮೇತನ್ಮಯಾತ್ವತ್ತೋ । ಯಥಾಸರ್ವಮಿದಂ ಜಗತ್ ।
ವಿಷ್ಣು ರ್ವಿಷ್ಣೋರಿವಿ ಷ್ಣು ಶ್ಚ । ನಪರಂವಿದ್ಯತೇ ತತಃ ।

3) ವಿಷ್ಣುಂಗ್ರಸಿಷ್ಣುಂ ವಿಶ್ವಸ್ಯ । ಸ್ಥಿತಿ ಸರ್ಗೇ ತಥಾಪ್ರಭುಃ ॥
ಪ್ರಣಮ್ಯಜಗತಾಮೀಶ । ಮಜನ್ಮ ಕ್ಷಯಮವ್ಯಯಂ ॥ (೧-೨-೭)

**ರಾಮಾಯಣೇ ಯುದ್ಧಕಾಂಡೇ :**

ತಮಸಃಪರಮೋಧಾತಾ । ಶಂಖಚಕ್ರಗದಾಧರಃ ॥

**ಭಾರತ ಶಾಂತಿ ಪಾರೇ**

ವೇದಾಕ್ಷರಾಣಿಯಾವನ್ತಿ । ಪಠಿತಾನಿದ್ವಿಜಾತಿಭಿಃ ॥
ತಾವನ್ತಿಹರಿನಾಮಾನಿ । ಕೀರ್ತಿತಾನಿ ನಸಂಶಯಃ ॥

ಇದೇ ಭಾರತದಲ್ಲಿ ಧರ್ಮರಾಜನು ಭೀಷ್ಮರನ್ನು ಕುರಿತು
ಶ್ರುತ್ವಾಧರ್ಮಾನ ಶೇಷೇಣ ಪಾವನಾನಿಚ ಸರ್ವಶಃ । ಎಂದು ಆರಂಭಿಸಿ
ಕಿಮೇಕಂ ದೈವತಂ ಲೋಕೇ ಕಿಂವಾಪ್ಯೇಕಂ ಪರಾಯಣಂ ॥ ಎಂದೂ
ಕೋಧರ್ಮಸ್ಸರ್ವಧರ್ಮಾಣಾ ಭವತಃ ಪರಮೋಮತಃ ॥
ಕಿಂಜಪನ್ಮುಚ್ಯತೇಜನ್ತುಃ ಜನ್ಮಸಂಸಾರ ಬಂಧನಾತ್ ॥

ಎಂದು ಈರೀತಿಯಾಗಿ ಪಕ್ಷಪಾತವಿಲ್ಲದೆ ಮಧ್ಯಸ್ಥವಾದ ಪ್ರಶ್ನೆಯನ್ನು ಮಾಡಿದ್ದಕ್ಕೆ ಉತ್ತರವಾಗಿ ಭೀಷ್ಮಾಚಾರ್ಯರು

"ಜಗತ್ಪ್ರಭುಂ ದೇವದೇವಮನನ್ತಂ ಪುರುಷೋತ್ತಮಂ ।" ಎಂದು ಆರಂಭಿಸಿ
"ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಂ ।
ಲೋಕಾಧ್ಯಕ್ಷಂಸ್ತುವನ್ನಿತ್ಯಂ ಸರ್ವದುಃಖಾತಿಗೋಭವೇತ್ ।
ಏಷಮೇಸರ್ವಧರ್ಮಾಣಾಂ ಧರ್ಮೋಧಿಕತಮೋಮತಃ ।
ಯಧ್ಭಕ್ತ್ಯಾ ಪುಂಡರೀಕಾಕ್ಷ ಸ್ತವೈರರ್ಚೇನ್ನರಸ್ಸದಾ ।
ಪರಮಂಯೋಮಹತ್ತೇಜಃ । ಪರಮಂಯೋಮಹತ್ತಪಃ ।
ಪರಮಂಯೋಮಹದ್ಬ್ರಹ್ಮ ಪರಮಂಯಃಪರಾಯಣಂ ।
ಪವಿತ್ರಾಣಾಂ ಪವಿತ್ರಂಯೋ ಮಂಗಳಾನಾಂಚ ಮಂಗಳಂ ।
ದೈವತಂದೇವತಾನಾಂಚ । ಭೂತಾನಾಂಯೋವ್ಯಯಃಪಿತಾ ॥
ಯತಸ್ಸರ್ವಾಣಿ ಭೂತಾನಿ ಭವಂತ್ಯಾದಿ ಯುಗಾಗಮೇ ।
ಯಸ್ಮಿಂಶ್ಚಪ್ರಳಯಂಯಾನ್ತಿ ಪುನರೇವಯುಗಕ್ಷಯೇ ।
ತಸ್ಯಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ ।
ವಿಷ್ಣೋರ್ನಾಮ ಸಹಸ್ರಂಮೇಶ್ರುಣುಪಾಪಭಯಾಪಹಂ ॥

ಎಂದು ಭೀಷ್ಮರು ಧರ್ಮರಾಯನಿಗೆ ಪರತತ್ತ್ವವು ಶ್ರೀಮನ್ನಾರಯಣನೇ ಎಂದು ನಿಸ್ಸಂದೇಹವಾಗಿ ಹೇಳಿರುವರು.

ಈ ರೀತಿಯಾಗಿ ಸ್ಮೃತೀತಿಹಾಸ ಪುರಾಣಾದಿಗಳಲ್ಲಿ ಇನ್ನೂ ಅಸಂಖ್ಯಾತಗಳಾದ ಪ್ರಮಾಣಗಳಿವೆ ಸ್ಥಳಸಂಕೋಚದಿಂದ ಒಂದೊಂದುವಾಕ್ಯವನ್ನು ಮಾತ್ರ ಇಲ್ಲಿ ಉದಾಹರಿಸಿದೆ.

**ಮಹರ್ಷಿಗಳ ವಚನಗಳು** ·

ಕೆಲವು ಮಹರ್ಷಿಗಳ ವಾಕ್ಯಗಳನ್ನೂ ಇಲ್ಲಿ ನೋಡಬಹುದು.

1) "ಸತ್ಯಂಸತ್ಯಂಪುನಸ್ಸತ್ಯಮುದ್ಧೃತ್ಯಭುಜಮುಚ್ಯತೇ ।
ವೇದಶಾಸ್ತ್ರಾತ್ಪರಂನಾಸ್ತಿ ನದೈವಂಕೇಶವಾತ್ಪರಂ ॥"

ಎಂದು ವೇದವ್ಯಾಸ ಮಹರ್ಷಿಗಳು ಹೇಳಿರುವರು

2) "ಕಿನ್ತು ಶ್ರೀಮದ್ಭುವನಭವನಸ್ಥಿತ್ಯಭಾವೈಕ ಹೇತೋಃ ।
ಲಕ್ಷ್ಮೀಭರ್ತುರ್ನರ ಹರಿತನೋರ್ದಾಸದಾಸಸ್ಯದಾಸಃ ॥

ಎಂದು ಶ್ರೀ ಶುಕಋಷಿಗಳು ಹೇಳಿರುವರು.

3) **ಇತಿಹಾಸಸಮುಚ್ಚಯೇ :**
ಯೇಭಜನ್ತಿಜಗದ್ಯೋನಿಂ । ವಾಸುದೇವಂ ಜನಾರ್ಧನಂ ।
ನತೇಭ್ಯೋವಿದ್ಯತೇತೀರ್ಥ । ಮಧಿಕಂರಾಜಸತ್ತಮ ॥
ಯೇವಾಸುದೇವಮರ್ಚನ್ತಿ । ಕರ್ಮಣಾಮನಸಾಗಿರಾ ।
ಸರ್ವಪಾಪವಿನಿರ್ಮುಕ್ತಾ । ದುರ್ಗಾಣ್ಯತಿತರಂತಿತೇ ॥
ಅನಾದಿನಿಧನೇದೇವೇ । ಜಗತಃಪ್ರಭವೇಚ್ಯುತೇ ।
ಭಕ್ತಾನ್ನಾರಾಯಣೇವಿಷ್ಣೌ । ದುರ್ಗಾಣ್ಯತಿತರಂತಿತೇ ॥
ಯೋದೂಷಯತಿಸಮ್ಮೋಹಾ । ದ್ವಾಸುದೇವಂಜಗತ್ಪತಿಂ ।
ಸರ್ವಲೋಕೈಕಕರ್ತಾರಂ । ತಂವಿದ್ಯಾದ್ಬ್ರಹ್ಮಘಾತಕಂ ॥
ಆದ್ಯಂಪುರುಷಮೀಶಾನಂ । ಸರ್ವಲೋಕಮಹೇಶ್ವರಂ ।
ನಚಿಂತಯಂತಿಯೇವಿಷ್ಣುಂ । ತೇವೈನಿರಯಗಾಮಿನಃ॥ ಎಂದು ಹೇಳಿದೆ.

4) ಮತ್ತು ಇದೇ ಇತಿಹಾಸ ಸಮುಚ್ಚಯದಲ್ಲಿ ಸಪ್ತಋಷಿಗಳು ಅನ್ಯೋನ್ಯ ಶಪಥಪೂರ್ವಕವಾಗಿ ಹೇಳಿರುವ ವಚನವು ಹೀಗಿರುವುದು—

ವಿಷ್ಣುಂಬ್ರಹ್ಮಣ್ಯದೇವೇಶಂ । ಸರ್ವದೇವನಮಸ್ಕೃತಂ ।
ತ್ರೈಲೋಕ್ಯಸ್ಥಿತಿಸಂಹಾರ । ಸೃಷ್ಟಿಹೇತುಂ ನಿರೀಶ್ವರಂ ।

ಆಧಾತಾರಂ ವಿಧಾತಾರಂ ಸಂಧಾತಾರಂ ಜಗದ್ಗುರುಂ ।
ವಿಹಾಯಯೋ ಭಜತ್ಯನ್ಯಂ । ಬಿಸಸ್ತೈನ್ಯಂ ಕರೋತಿಸಃ ॥ ಎಂದರೆ,
ಶ್ರೀವಿಷ್ಣುವೇ ಬ್ರಹ್ಮಾದಿ ಸಮಸ್ತ ದೇವತೆಗಳಿಗೂ ದೈವವಾಗಿಯೂ, ನಮಸ್ಕಾರಾರ್ಹ ನಾಗಿಯೂ ಇರುವನು ಅವನೇ ತ್ರೈಲೋಕ್ಯಗಳಿಗೂ ಸೃಷ್ಟಿಸ್ಥಿತಿ ಸಂಹಾರಕರ್ತನು. ಇವನನ್ನು ಬಿಟ್ಟು ಬೇರೆ ದೈವವನ್ನು ಪರತತ್ತ್ವವನ್ನಾಗಿ ನೆನೆಯುವವನು ಆತ್ಮಾಪಹಾರ ದೋಷಕ್ಕೆ ಭಾಗಿಯಾಗುವನು.

**ಜ್ಯೋತಿಷಶಾಸ್ತ್ರ ವಚನ :**

ಇನ್ನೂ ಮಧ್ಯಸ್ಥಶಾಸ್ತ್ರವಾದ ಜ್ಯೋತಿಷಶಾಸ್ತ್ರದಲ್ಲಿಯೂ ಶ್ರೀಮನ್ನಾರಾಯಣನೇ ಪರತತ್ತ್ವವೆಂಬುವುದನ್ನು ಈರೀತಿಯಾಗಿ ಹೇಳಿರುತ್ತದೆ.

ತತ್ರ ಬ್ರಹ್ಮಸಿದ್ಧಾಂತೇ ಭೂಗೋಳಾಧ್ಯಾಯೇ ಸಪ್ತಮೇ ನಾರದಂ
ಪ್ರತಿಬ್ರಹ್ಮಾ—
ಅಸ್ಮಾನ್ನಾರಾಯಣಾದ್ಭೀಷಾ ವಾತಃಪವತಏವಹಿ ।
ಉದೇತಿಸೂರ್ಯೋ ಮೃತ್ಯುಶ್ಚಧಾವತೀಂ ದ್ರೋಪಿವರ್ಷತಿ ।
ತದಾಶ್ರಯಮಹಾಮಾಯಾಽ ನಾದಿರ್ನೀಹಾರಸನ್ನಿಭಾ ॥ ಎಂದರೆ,

ಪರಬ್ರಹ್ಮನಾದ ಆ ಶ್ರೀಮನ್ನಾರಾಯಣನ ಭಯದಿಂದಲೇ ವಾಯುವು ಬೀಸುತ್ತದೆ, ಸೂರ್ಯನು ಕಾಲಕ್ಕೆ ಸರಿಯಾಗಿ ಉದಯಿಸುತ್ತಾನೆ, ಮೃತ್ಯುವು ತನ್ನ ಕರ್ತವ್ಯೋನ್ಮುಖನಾಗಿ ಓಡುತ್ತಿರುತ್ತಾನೆ, ಇಂದ್ರನೂ ಸಕಾಲದಲ್ಲಿ ಮಳೆಯನ್ನು ಸುರಿಸುತ್ತಿರುತ್ತಾನೆ ಮತ್ತು ಶ್ರೀಮನ್ನಾರಾಯಣನನ್ನು ಆಶ್ರಯಿಸಿರುವ ಮಾಯೆಯೂ ಕೂಡ ಅವನ ಭಯದಿಂದಲೇ ಜನಗಳ ಜ್ಞಾನವನ್ನು ತೆರೆಯಂತೆ ಮರೆಸುತ್ತದೆ.

ಇದೇ ಜ್ಯೋತಿಷಶಾಸ್ತ್ರದ ಸೂರ್ಯ ಸಿದ್ಧಾಂತದ ೧೭ನೆಯ ಅಧ್ಯಾಯದಲ್ಲಿ ಮಯನಿಗೂ ಸೂರ್ಯಾಂಶ ಪುರುಷನಿಗೂ ನಡೆದ ಸಂವಾದದಲ್ಲಿ

" ಭಗವನ್ ಕಿಂಪ್ರಮಾಣಾಭೂಃ । ಕಿಮಾಕಾರಃ ಕಿಮಾಶ್ರಯಾ "

ಎಂದು ಇಂತಹ ಸಾಮಾನ್ಯ ಪ್ರಶ್ನೆಗೆ ಉತ್ತರವಾಗಿ....

ಇತಿಭಕ್ತ್ಯೋದಿತಂಶ್ರುತ್ವಾ ಮಯೇನೇದಂಹಿಪೂರುಷಃ ।
ರಹಸ್ಯತರಮಧ್ಯಾತ್ಮಂ ತತಃಪ್ರಾಹಪುನಸ್ಸತಂ ॥
ಶೃಣುಷ್ವೈಕಮನಾಭೂತ್ವಾ । ಗುಹ್ಯಮಧ್ಯಾತ್ಮಸಂಜ್ಞಿತಂ ।
ಪ್ರವಕ್ಷ್ಯಾಮಿಚಭಕ್ತಾನಾಂ । ನಾದೇಯಂವಿದ್ಯತೇಽನಘ ॥
ವಾಸುದೇವಃಪರಂಬ್ರಹ್ಮ । ತನ್ಮೂರ್ತಿಃಪುರುಷಃಪರಃ ।
ಅವ್ಯಕ್ತೋನಿರ್ಗುಣಶ್ಶಾಂತೋ । ಪಂಚವಿಂಶಾತ್ಪರೋಽವ್ಯಯಃ ॥

ಎಂದರೆ, ಈ ರೀತಿಯಾಗಿ ಭಕ್ತನಿಂದ ಕೇಳಲ್ಪಟ್ಟ ಪ್ರಶ್ನೆಗೆ ಉತ್ತರವಾಗಿ ಸೂರ್ಯಾಂಶ ಪುರುಷನು ಮಯನನ್ನು ಕುರಿತು ಗುಹ್ಯತಮವಾದ ಆಧ್ಯಾತ್ಮತತ್ತ್ವದ ವಿಷಯವಾಗಿ ಪರಮ ವೈಕುಂಠವಾಸಿಯಾದ ಪರವಾಸುದೇವನೇ ಪರಬ್ರಹ್ಮನೆಂದೂ ಅವನ ದಿವ್ಯ ಮಂಗಳ ವಿಗ್ರಹವೇ ಪರಮಪುರುಷನೆಂದೂ, ಅವನೇ ಚಿದಚಿತ್ಪರನಾದ ಪರತತ್ತ್ವವೆಂದೂ ಹೇಳಿದನು

ಇದೇ ಜ್ಯೋತಿಷ ಶಾಸ್ತ್ರದಲ್ಲಿ—ರೋಮಶ ಸಿದ್ಧಾಂತದಲ್ಲಿ

ಸಾಕ್ಷಾನ್ನಾರಾಯಣ ಶ್ರೀಮಾನ್ । ಪರಂಬ್ರಹ್ಮೇತಿ ಸಂಸ್ಮೃತಃ ।
ಆದ್ಯಂತರಹಿತಃಶುದ್ಧಃ । ಕೂಟಸ್ಥಃಕೇವಲೋಽ ಜರಃ ।
ಕಾರ್ಯಕಾರಣಸಂಘಾತಃ । ಸರ್ವಜ್ಞಸ್ಸರ್ವಗಶ್ಶುಚಿಃ । ಎಂದು ಆರಂಭಿಸಿ
ವಿಷ್ಣ್ವಾಧಾರಂ ಜಗತ್ಕಾರ್ಯಂ ಕಾರಣಂ ಚಾನುಮಾಯಯಾ" ಎಂದು

ಹೇಳಿರುವುದು

ಈ ರೀತಿಯಾಗಿ "ವಾಸುದೇವಃ ಪರಂಬ್ರಹ್ಮ" ಎಂದೂ "ಸಾಕ್ಷಾನ್ನಾರಾಯಣ ಶ್ರೀಮಾನ್ ಪರಂಬ್ರಹ್ಮ" ಎಂದು ಹೇಳಿರುವ ವಾಕ್ಯಗಳು "ನಾರಾಯಣ ಪರಂಬ್ರಹ್ಮ" (ಪು ಸೂಕ್ತ.) ಮತ್ತು ತೈತ್ತಿರಿಯೋಪನಿಷತ್ತಿನ "ಯತೋವಾ ಇಮಾನಿಭೂತಾನಿ ಜಾಯನ್ತೇ" ಇತ್ಯಾದಿ ಶ್ರುತಿ ವಾಕ್ಯಗಳನ್ನು ಅನುಸರಿಸಿರುವುದು.

## ಶಂಕರಾಚಾರ್ಯರ ಹೃದಯವೂ ಶ್ರೀಮನ್ನಾರಾಯಣನ ಪರತ್ವದಲ್ಲೇ ನೆಲೆಸಿದ್ದಿತು :

ಈ ಶ್ರುತಿಸ್ಮೃತ್ಯಾದಿಗಳಲ್ಲದೆ ಅದ್ವೈತವಾದಿಯಾದ ಶ್ರೀ ಶಂಕರಾಚಾರ್ಯರೂಕೂಡ ತಾವು ರಚಿಸಿದ ಬ್ರಹ್ಮಸೂತ್ರಭಾಷ್ಯದಲ್ಲಿ ಶ್ರೀಮನ್ನಾರಾಯಣನೇ ಜಗತ್ಕಾರಣ ವಸ್ತುವು ಎಂದು ಹೇಳಿರುವರು.

ತತ್ರದ್ವಿತೀಯೋಽ ಧ್ಯಾಯೇ ಪ್ರಥಮಸೂತ್ರೇ :—
ಅತಶ್ಚಸಂಕ್ಷೇಪಮಿದಂಶೃಣುಧ್ವಂ, ನಾರಾಯಣಸ್ಸರ್ವಮಿದಂಪುರಾಣಂ ।
ಸಸರ್ಗಕಾಲೇಚಕರೋತಿಸರ್ಗಂ ಸಂಹಾರಕಾಲೇಚತದತ್ತಿಭೂಯಃ ॥

ಎಂದರೆ, "ಸಂಕ್ಷೇಪವಾಗಿ ತತ್ತ್ವವು ಇಷ್ಟೇ" ಶ್ರೀಮನ್ನಾರಾಯಣನೇ ಪುರುಷೋತ್ತಮನೂ ಮತ್ತು ಸರ್ವಸ್ವವೂ ಆಗಿರುವನು. ಸೃಷ್ಟಿಕಾಲದಲ್ಲಿ ಪ್ರಪಂಚವನ್ನು ಸೃಷ್ಟಿಸಿದವನೂ ಅವನೇ, ಮತ್ತು ಸಂಹಾರಕಾಲದಲ್ಲಿ ಪುನಃ ಆ ಪ್ರಪಂಚವನ್ನು ತನ್ನಲ್ಲಿ ಅಡಗಿಸಿಕೊಳ್ಳುವವನೂ ಅವನೇ" ಎಂದು ಹೇಳಿರುವರು. ಮತ್ತು ಅದೇ ಶ್ರೀ ಶಂಕರಾಚಾರ್ಯರು ತಾವು ಒರೆದಿರುವ ಸಹಸ್ರನಾಮ ಭಾಷ್ಯದಲ್ಲಿ "ಕೇಶವಃ" ಎಂಬ ನಾಮವನ್ನು ವ್ಯಾಖ್ಯಾನಮಾಡಿ "ಕ. ಇತಿಬ್ರಹ್ಮಣೋನಾಮ" ಎಂದೂ

"ಸರ್ವೇಶ್ವರಃ" ಎಂಬ ಪದಕ್ಕೆ "ಲೋಕೇಶೆ ಬ್ರಹ್ಮರುದ್ರಾಣಾಮಾಶ್ವರಸ್ಸರ್ವೇಶ್ವರ ಸ್ಮೃತಃ" ಎಂದೂ ಮತ್ತು "ಅಮರಪ್ರಭುಃ" ಎಂಬ ಪದಕ್ಕೆ ವ್ಯಾಖ್ಯಾನಮಾಡಿ "ಅಮರಯೋಃ ಬ್ರಹ್ಮರುದ್ರಯೋಃ ಅಸ್ಯತನು ಪ್ರಭವತ್ವಾತ್ ಅಮರಪ್ರಭುಃ" ಎಂದೂ ವ್ಯಾಖ್ಯಾನಮಾಡಿರುವುದರಿಂದ ಶ್ರೀ ಶಂಕರಾಚಾರ್ಯರೂಕೂಡ ಶ್ರೀಮನ್ನಾ-ರಾಯಣನೇ ಪರತತ್ತ್ವವೆಂಬುವುದನ್ನು ಒಪ್ಪಿಕೊಂಡಿರುತ್ತಾರೆ.

ರುದ್ರನೂಕೂಡ—

ಹರಿರೇಕಸ್ಸದಾಧ್ಯೇಯೋ ಭವದ್ಭಿಸ್ಸತ್ವ ಸಂಸ್ಥಿತಃ ।
ಓಮಿತ್ಯೇವಸದಾ ವಿಪ್ರಾಃಪಠಧ್ವಂಧ್ಯಾತಕೇಶವಂ ॥

ಎಂದರೆ, ಸಾತ್ವಿಕರಾದ ವಿಪ್ರರೆಲ್ಲರೂ ಪ್ರಣವಸ್ವರೂಪಿಯಾದ ಶ್ರೀಮನ್ನಾರಾಯಣನನ್ನೇ ಧ್ಯಾನಿಸಬೇಕು ಎಂದು ಹೇಳಿರುವುದರಿಂದ ರುದ್ರನೂ ಶ್ರೀಮನ್ನಾರಾಯಣನೇ ಪರಾತ್ಪರನು ಮತ್ತು ಧ್ಯೇಯನು ಎಂದು ಅಭಿಪ್ರಾಯಪಟ್ಟಿರುವನು

ಈ ರೀತಿಯಾಗಿ ವೇದಾನ್ತ ಇತಿಹಾಸ, ಪುರಾಣಾದಿ ಸಮಸ್ತ ಶಾಸ್ತ್ರಗಳೂ, ಮಹರ್ಷಿಗಳ ವಚನಗಳೂ ಏಕಕಂಠವಾಗಿ ಸರ್ವಸ್ಮಾತ್ಪರನಾದ ಶ್ರೀಮನ್ನಾರಾಯಣನೇ ಪರತತ್ತ್ವವೆಂಬ ವಿಷಯವನ್ನು ನಿಸ್ಸಂಶಯವಾಗಿ ಹೇಳಿರುವುದರಿಂದ ವಿವೇಕಿಗಳಾದ ನಾವು ಈ ವಿಶಯದಲ್ಲಿ ಯಾವ ಅನುಮಾನವನ್ನೂ ಇಟ್ಟುಕೊಳ್ಳಲು ಅವಕಾಶವಿಲ್ಲ. ಈ ಅನೇಕ ಶಾಸ್ತ್ರಗಳಿಂದ ಅಲ್ಲಲ್ಲಿ ಒಂದೊಂದು ವಾಕ್ಯವನ್ನು ಮಾತ್ರ ಉದಾಹರಿಸಿದೆ. ಪರತತ್ತ್ವದ ವಿಚಾರದಲ್ಲಿ ಶಾಸ್ತ್ರಪ್ರಮಾಣವೇ ಆಧಾರವೆಂದು ಮೊದಲೇ ಹೇಳಲಾಗಿದೆ.

## ಇತರ ದರ್ಶನಗಳು ಪರತತ್ತ್ವವನ್ನು ಸರಿಯಾಗಿ ಸಮರ್ಥಿಸುವುದಿಲ್ಲ :

ಈ ರೀತಿಯಾಗಿ ವೇದಶಾಸ್ತ್ರವನ್ನು ವಿಮರ್ಶಿಸಿ ಸ್ಮೃತೀತಿಹಾಸ ಪುರಾಣಾದಿಗಳ ಸಹಾಯದಿಂದ ಪರತತ್ತ್ವವನ್ನು ನಿರ್ಣಯಿಸದೆ ಕೆಲವರು ಆ ವೇದವಾಕ್ಯಗಳಿಗೆ ತಮ್ಮ ವಿದ್ಯಾಮಾಹಾತ್ಮ್ಯದಿಂದ ಇಷ್ಟಪ್ರಕಾರವಾಗಿ ಅರ್ಥವನ್ನು ಕಲ್ಪಿಸಿಯೂ ಮತ್ತು ಬೇರೆ ತರ್ಕವಾದ ಸರಣಿಗಳಿಂದಲೂ ಅನೇಕ ದರ್ಶನಗಳನ್ನು ಸ್ಥಾಪಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಶಾಂಕರ, ಭಾಸ್ಕರ, ಯಾದವಪ್ರಕಾಶ, ಭಾಟ್ಟ, ಪ್ರಭಾಕರ ಮತಗಳನ್ನು ಭಗವದ್ರಾಮಾನುಜಾಚಾರ್ಯರು ತಮ್ಮ ಶ್ರೀ ಭಾಷ್ಯಗ್ರನ್ಥದ ಜಿಜ್ಞಾಸಾಧಿಕರಣದಲ್ಲಿ ಶಾಸ್ತ್ರಾಧಾರದಿಂದಲೇ ಬಹುಮುಖವಾಗಿ ಖಂಡಿಸಿ ಶ್ರೀಮನ್ನಾರಾಯಣನೇ ಪರತತ್ತ್ವವೆಂಬ ಸಿದ್ಧಾನ್ತವನ್ನು ಸ್ಥಾಪಿಸಿರುತ್ತಾರೆ ಭಗವಾನ್ ಬಾದರಾಯಣರೇ ತಮ್ಮ ಬ್ರಹ್ಮಸೂತ್ರ ಗ್ರನ್ಥದಲ್ಲಿ ಕಾಣಾದ, ಬೌದ್ಧ, ಜೈನ ಮತ್ತು ಪಾಶುಪತ ಮತಗಳನ್ನು ಖಂಡಿಸಿರುತ್ತಾರೆ. ಈ ವಿಚಾರವೇ ಒಂದು ಮಹದ್ಗ್ರಂಥ ರೂಪವಾಗಿರುವುದರಿಂದ ಅವುಗಳನ್ನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಇವುಗಳಿಂದ

ಮುಖ್ಯವಾಗಿ ಗ್ರಹಿಸಬೇಕಾದ ಅಂಶವೇನೆಂದರೆ ಕೆಲವು ದರ್ಶನಗಳು ಪ್ರತ್ಯಕ್ಷಪ್ರಮಾಣವನ್ನು ಮಾತ್ರ ಅಂಗೀಕರಿಸುವುವು ಕೆಲವು ದರ್ಶನಗಳು ಪ್ರತ್ಯಕ್ಷ ಮತ್ತು ಅನುಮಾನ ಈ ಎರಡು ಪ್ರಮಾಣಗಳನ್ನು ಮಾತ್ರ ಅಂಗೀಕರಿಸುವುವು. ಈ ದರ್ಶನಗಳು ಶಬ್ದ ಪ್ರಮಾಣವನ್ನು ಆಧಾರವಾಗಿ ಅಂಗೀಕರಿಸುವುದಿಲ್ಲ. ಪರಬ್ರಹ್ಮನ ವಿಚಾರದಲ್ಲಿ ಮೊದಲೇ ತಿಳಿಸಿದಂತೆ ಶಬ್ದ ಪ್ರಮಾಣವೇ ಮುಖ್ಯವಾದ ಆಧಾರವಾದ್ದರಿಂದ ಪ್ರತ್ಯಕ್ಷಾನುಮಾನ ಪ್ರಮಾಣಗಳನ್ನು ಮಾತ್ರವೇ ಅಂಗೀಕರಿಸುವ ಕೆಲವು ದರ್ಶನಗಳು ನಮಗೆ ಗ್ರಾಹ್ಯವಲ್ಲ.

ಶಬ್ದಪ್ರಮಾಣವಾದ ವೇದವನ್ನು ಅಂಗೀಕರಿಸುವ ಕೆಲವು ದರ್ಶನಗಳೂ ವೇದ ವಾಕ್ಯಗಳಿಗೆ ತಮ್ಮ ತಮ್ಮ ವಿದ್ಯಾ ಮಾಹಾತ್ಮ್ಯದಿಂದ ಇಷ್ಟಪ್ರಕಾರ ಅರ್ಥವನ್ನು ಹೇಳಿ ಈ ವೇದದಲ್ಲಿ ಸ್ವಲ್ಪ ಭಾಗವನ್ನು ಮಾತ್ರ ಒಪ್ಪಿಕೊಂಡು ಉಳಿದುದನ್ನು ಅಮುಖ್ಯವೆಂದು ವೇದದಲ್ಲಿ ವಿಭಾಗವನ್ನು ಕಲ್ಪಿಸುವರು ಹೀಗೆ ವಿಭಾಗವನ್ನು ಕಲ್ಪಿಸುವುದಕ್ಕೆ ಅವರಿಗೆ ಪ್ರಮಾಣವಾಗಲಿ ಅಧಿಕಾರವಾಗಲಿ ಇಲ್ಲ ಅಪೌರುಷೇಯುವಾದ ವೇದವನ್ನು ಒಟ್ಟಕ್ಕೆ ಸತ್ಯವಾದುದನ್ನಾಗಿ ಗ್ರಹಿಸಬೇಕು- ಹೀಗೆ ಮಾಡದೇ ಇರುವುದರಿಂದ ಅವರ ದರ್ಶನಗಳು ಶಾಸ್ತ್ರಾನುಸಾರವಾದುದ್ದಾಗುವುದಿಲ್ಲ.

ಈ ದರ್ಶನಗಳಲ್ಲಿ ವಿಶಿಷ್ಟಾದ್ವೈತ ಮತವು ವೇದವೇದಾನ್ತ ಸ್ಮೃತೀತಿಹಾಸ ಪುರಾಣಗಳೆಲ್ಲವನ್ನೂ ಅಂಗೀಕರಿಸಿ ಅವುಗಳಲ್ಲಿ ಹೇಳಿರುವ ವಿಷಯಗಳೆಲ್ಲಕ್ಕೂ ಸಮಂಜಸವಾಗುವಂತೆ ದರ್ಶನವನ್ನು ಸ್ಥಾಪಿಸಿರುವುದು ಈ ಸಿದ್ಧಾನ್ತರೀತ್ಯಾ ಶ್ರೀಮನ್ನಾರಾಯಣನೇ ಪರತತ್ತ್ವವೆಂದೂ ಚಿದಚಿದಾತ್ಮಕವಾದ ಸಮಸ್ತಪ್ರಪಂಚವೂ ಆ ಪರಬ್ರಹ್ಮನ ಶರೀರವೆಂದೂ ಸ್ಥಿರಪಡುವುದು

## ಆಳ್ವಾರ್ರುಗಳು ಮತ್ತು ಪೂರ್ವಾಚಾರ್ಯರುಗಳ ಮತರೀತ್ಯಾ ಶ್ರೀಮನ್ನಾರಾಯಣನೇ ಪರತತ್ತ್ವವು :

ನಮ್ಮ ಪೂರ್ವಾಚಾರ್ಯರುಗಳೂ ಮತ್ತು ಆಳ್ವಾರ್ರುಗಳೂ ಶ್ರೀಮನ್ನಾರಾಯಣನೇ ಪರತತ್ತ್ವವೆಂಬುವುದನ್ನು ಬಹುಮುಖವಾಗಿ ಹೇಳಿರುವರು ಬಹುಸೂಕ್ಷ್ಮವಾಗಿ ಅವುಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ವಿವರಿಸುವೆವು.

ಜಗತ್ಕಾರಣವಸ್ತುವು ಯಾವುದು ಎಂಬುದರ ವಿಷಯವಾಗಿ ಭಗವಾನ್ ಬಾದರಾಯಣರು (ಎಂದರೆ ವೇದವ್ಯಾಸ ಮಹರ್ಷಿಗಳು) ತಮ್ಮ ಬ್ರಹ್ಮಸೂತ್ರದಲ್ಲಿ "ಜನ್ಮಾದ್ಯಸ್ಯಯತಃ"ಎಂದು ಹೇಳಿರುವ ಸೂತ್ರವನ್ನು ಭಗವದ್ರಾಮಾನುಜಾಚಾರ್ಯರು ವಿವರಿಸಿ ಮಹೋಪನಿಷತ್ತಿನಲ್ಲಿ ಹೇಳಿರುವ "ಏಕೋಹವೈನಾರಾಯಣ ಆಸೀತ್" ಎಂಬ ವಾಕ್ಯವು ಶ್ರೀಮನ್ನಾರಾಯಣನೇ ಆ ಪರಬ್ರಹ್ಮವು ಎಂದು ಸಮರ್ಥಿಸಿರುವ ವಿಷಯವು ಹಿಂದೆಯೇ ಹೇಳಲ್ಪಟ್ಟಿರುವುದು. ಬ್ರಹ್ಮರುದ್ರಾದಿ ಸಮಸ್ತ ಪದಗಳೂ

ಸಾಮಾನಾಧಿಕರಣ್ಯ ನ್ಯಾಯದಿಂದ ಪರಬ್ರಹ್ಮನಾದ ಶ್ರೀಮನ್ನಾರಾಯಣನ ಹೆಸರುಗಳೇ ಆಗುವುವು. ಆದರೆ ನಾರಾಯಣ ಶಬ್ದವು ಬ್ರಹ್ಮ ರುದ್ರಾದಿಗಳಿಗೆ ಅನ್ವಯಿಸುವುದಿಲ್ಲ. ಯೋಗರೂಢಿಯಿಂದ ನಾರಾಯಣಪದವು ಪರಬ್ರಹ್ಮನನ್ನೇ ಸೂಚಿಸುವುದು ಎಂಬುವುದನ್ನು ನಮ್ಮ ಪೂರ್ವಾಚಾರ್ಯರುಗಳು ಈ ವಿಧವಾಗಿ ಸಮರ್ಥಿಸಿರುವರು.

ಈ "ನಾರಾಯಣ" ಪದವು 1) "ನಾರಾಣಾಂ ಅಯನಂಯಸ್ಯಸಃ-ನಾರಾಯಣಃ" ಎಂದು ತತ್ಪುರುಷ ಸಮಾಸರೂಪವಾಗಿಯೂ 2) ನಾರಾಃ ಅಯನಂಯಸ್ಯಸಃ ನಾರಾಯಣಃ" ಎಂದು ಬಹೂವ್ರೀಹಿಸಮಾಸ ರೂಪವಾಗಿಯೂ ಪದಚ್ಛೇದ ಮಾಡಲ್ಪಟ್ಟಿರುವುದು.

1) ಇವುಗಳಲ್ಲಿ ತತ್ಪುರುಷ ಸಮಾಸರೀತ್ಯಾ 'ನಾರ' ಶಬ್ದವು 'ನರ' ಶಬ್ದ ವಾಚ್ಯನಾದ ಚೇತನರುಗಳ ಸಮೂಹವನ್ನು ಸೂಚಿಸುವುದು 'ಅಯನ' ಶಬ್ದವು ಆಚೇತನರುಗಳಿಗೆ 'ಗತಿ' ಯಾದವನು ಎಂದು ಅರ್ಥವಾಗಿ ಈ ರೀತಿಯಾಗಿ ನಾರಾಯಣ ಶಬ್ದವು ಚೇತನರುಗಳಿಗೆಲ್ಲಾ ರಕ್ಷಕನೂ, ಶೇಷಿಯೂ, ಉಪಾಯವೂ, ಮತ್ತು ಉಪೇಯವೂ ಎಂಬುವುದನ್ನು ಹೇಳುವುದು.

2) ಬಹೂವ್ರೀಹಿಸಮಾಸರೀತ್ಯಾ 'ರಿಜ್' 'ಕ್ಷಯೇ' ಎಂಬ ಧಾತುವಿನಲ್ಲಿ 'ರ' ಎಂಬ ಪದವು ಕ್ಷಯಿಸುವ ವಸ್ತುಗಳನ್ನು ಹೇಳಿ 'ನ' ಕಾರವು ಅದನ್ನು ನಿಷೇಧಿಸಿ 'ನರ' ಎಂಬ ಕ್ಷಯವಿಲ್ಲದ ನಿತ್ಯ ವಸ್ತುವನ್ನು ಸೂಚಿಸಿ, ಸಮೂಹಾರ್ಥದಲ್ಲಿ 'ನಾರಃ'ಎಂದು ನಿತ್ಯವಸ್ತುಗಳನ್ನು ಸೂಚಿಸಿ, 'ನಾರಾಃ' ಎಂದು ಬಹುವಚನವಾದ್ದರಿಂದ ಸಮೂಹ ಬಾಹುಳ್ಯವನ್ನು ಸೂಚಿಸುತ್ತದೆ. 'ಅಯನ' ಶಬ್ದವು ವಾಸಸ್ಥಾನವನ್ನು ಸೂಚಿಸುತ್ತದೆ. ಈ ನಿತ್ಯ ವಸ್ತುಗಳ ಸಮೂಹದಲ್ಲಿ ನಿತ್ಯ ವಿಭೂತಿಯಲ್ಲಿರುವ ಎಲ್ಲಾ ವಸ್ತುಗಳೂ ಮತ್ತು ಲೀಲಾ ವಿಭೂತಿಯಲ್ಲಿರುವ ಚಿದಚಿತ್ತುಗಳೆಲ್ಲವೂ ಸೇರುತ್ತವೆ ಇದರಿಂದ ನಾರಾಯಣನು ಸಮಸ್ತ ಚೇತನಾಚೇತನರುಗಳಿಗೆಲ್ಲಾ ವಾಸಸ್ಥಾನನೆಂದೂ ಆವನು ಅವುಗಳಿಗೆಲ್ಲಾ ಅಂತರ್ಯಾಮಿಯೂ, ಧಾರಕನೂ, ಪೋಷಕನೂ ಆಗಿರುವನು ಎಂದೂ ಹೇಳುವುದು. ಹೀಗೆ ನಾರಾಯಣ ಶಬ್ದವು ಪರಬ್ರಹ್ಮನೊಬ್ಬನಿಗೇ ಅನ್ವಯಿಸುವುದು.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು 'ಅಹಂಸರ್ವಸ್ಯಪ್ರಭವೋ ಮತ್ತಃಸರ್ವಂ ಪ್ರವರ್ತತೇ' (೧೦-೮) ಎಂದೂ 'ಅಹಂಸರ್ವಸ್ಯಜಗತಃ ಪ್ರಭವಃಪ್ರಲಯಸ್ತಥಾ' ಎಂದೂ ಇನ್ನೂ ಇತರ ವಾಕ್ಯಗಳಿಂದ ತಾನೇ ಪರಬ್ರಹ್ಮನೆಂಬುವುದನ್ನು ಸೂಚಿಸಿರುವನು.

'ನಾಡಿನೇಽನಾಡಿ ‑ನ್ಸ್ ಕಂಡುಕೊಂಡೇನ್ ನಾರಾಯಣಾವೆನ್ನುಂನಾಮಂ' ಎಂದು ತಿರುಮಂಗೈ ಆಳ್ವಾರ್ರೂ 'ನಾರಾಯಣನೇ ನಮಕ್ಕೇ ಪರೈತರುವಾರ್' ಎಂದೂ ಶ್ರೀ ಗೋದಾದೇವಿಯೂ 'ನಾರಾಯಣನೇ ಪರದೈವವು' ಎಂದು ಹಾಡಿರುವರು.

ನಾರಾಯಣನೇ ಪರಬಹ್ಮನು ಬ್ರಹ್ಮರುದ್ರಾದಿಗಳು ಅವನ ಅಧೀನರು ಎಂಬುವುದನ್ನು ಆಳ್ವಾರ್ರುಗಳು ತಮ್ಮ ದಿವ್ಯ ಪ್ರಬಂಧಗಳಲ್ಲಿ ಅನೇಕ ಕಡೆಗಳಲ್ಲಿ ಹಾಡಿರುವರು

ತಿರುಮೊಳಿಶೈಆಳ್ವಾರ್ರು.

1) "ನಾರರ್ಣ ಪಡೈತ್ತಾ್ ನಾನ್ಮುಕನೈ। ನಾನ್ಮುಕನುಕ್ಕೇರಾರ್‌ಶಿವ್ನ ಪಿರಂದಾರ್" (೪-ತಿ ಅನ್ದಾದಿ ೧)

ಎಂದರೆ ನಾರಾಯಣನಿಂದ ಚತುರ್ಮುಖನೂ ಅವನಿಂದ ರುದ್ರನೂ ಜನಿಸಿದರುಎಂದೂ

2) "ಮಲರ್ರೋಽಕಣ್ಣುತಲೋನೆ ತೊಳುನ್ಪ್ಕೈಯಾರ್ ನಾಳುಂತೊಡನ್ಬ್ರ" (೨-ತಿ ಅನ್ದಾದಿ)

ಎಂದರೆ ಬ್ರಹ್ಮನೂ ರುದ್ರನೂ ಆ ನಾರಾಯಣನನ್ನು ನಿತ್ಯವೂ ನಮಸ್ಕರಿಸಿ ಆಶ್ರಯಿಸುವುದೇ ಸ್ವಭಾವವಾಗಿ ಉಳ್ಳವರು ಎಂದೂ.

ನಮ್ಮಾಳ್ವಾರ್ರು

1) ಒನ್ರೆನಪ್ಪಲವೆನವರಿವರುಂ ವಡಿವಿನುಳ್‌ನಿನ್ರ। ನನ್ರೆಳಿಲ್‌ನಾರರ್ಣನಾನು ಕನರನರನೆನ್ನುಮಿವರ್ರೈ ॥ (ತಿ. ವಾಯ್ ೧-೩-೭)

ಎಂದರೆ ಬ್ರಹ್ಮರುದ್ರಾದಿ ಅನೇಕ ಮೂರ್ತಿಗಳ ರೂಪವನ್ನು ತಾನೇ ಧರಿಸಿರುವ ನಾರಾಯಣನಲ್ಲೇ ಈಶ್ವರತ್ವ ಬುದ್ಧಿಯನ್ನಿಡಿರಿ ಇತರ ದೇವತೆಗಳಲ್ಲಿ ಈಶ್ವರತ್ವ ಬುದ್ಧಿಯನ್ನು ತ್ಯಜಿಸಿರಿ ಎಂದೂ.

2) "ವಲತ್ತನ್ರ ತಿರಿಪುರಮೆರಿತ್ತವ್ನ" (ತಿ. ವಾಯ್ ೧-೩-೭)

ಎಂಬ ಪಾಶುರದಲ್ಲಿ ನಾರಾಯಣನ ನಾಭೀಕಮಲದಲ್ಲಿ ಬ್ರಹ್ಮನೂ, ಅವನ ಬಲ ಪಾರ್ಶ್ವದಲ್ಲಿ ರುದ್ರನೂ ಇರುವರು ಎಂದೂ.

3) "ಪಿರರ್ಮುಶಿವನಿನ್ದಿರನಾದಿಕೆಲ್ಲಾಂ ನಾಪಿಕ್ಕಮಲಮುದರ್ಕಿಳಂಗು" (ತಿ. ವಾಯ್ ೧೦-೧೦-೩)

ಎಂದರೆ ರುದ್ರೇಂದ್ರಾಂದಿಗಳಿಗೆ ಕಾರಣನಾದ ಬ್ರಹ್ಮನಿಗೆ ಕಾರಣಭೂತವಾದ ನಾಭೀ ಕಮಲಕ್ಕೆ ಮೂಲಭೂತನಾದ ನಾರಾಯಣನೇ ಎಂದೂ.

ತಿರುಮಂಗೈ ಆಳ್ವಾರ್ರು—

"ನೀರೇರು ಶೆಂಜಡೈ ನೀಲಕಂಟನುಂ ನಾನ್ಮು ಕನುಂಮುಱೈಯಾಲ್ ।
ಶೀರೇರುವಾಶಕಂಶೈಯ ನಿನ್ರ ತಿರುಮಾಲ್ ॥ (ಪೆ ತಿರುಮೊಳಿ ೪-೧-೫)

ಎಂದರೆ ಬ್ರಹ್ಮ ರುದ್ರರನ್ನೂ ಮತ್ತು ಲಕ್ಷ್ಮೀದೇವಿಯನ್ನೂ ತನ್ನ ಶರೀರದ ಏಕದೇಶ ದಲ್ಲಿಟ್ಟುಕೊಂಡಿರುವ ನಾರಾಯಣನು ಎಂದೂ ಶ್ರೀಮನ್ನಾರಾಯಣನೇ ಪರತತ್ತ್ವ ವೆಂದೂ ಬ್ರಹ್ಮರುದ್ರಾದಿಗಳು ಅವನ ಕಿಂಕರರೆಂದೂ ಹೇಳಿರುವರು.

ಆಳವಂದಾರ್ರು ತಮ್ಮ ಸ್ತೋತ್ರ ರತ್ನದಲ್ಲಿ—

ಸ್ವಾಭಾವಿಕಾನವಧಿಕಾತಿಶಯೇಶಿತೃತ್ವಂ ।
ನಾರಾಯಣತ್ವಯಿನಮೃಷ್ಯತಿ ವೈದಿಕಃಕಃ ।
ಬ್ರಹ್ಮಾಶಿವಶ್ಶತಮಖಃ ಪರಮಸ್ವರಾಡಿ ।
ತ್ಯೇತೇಪಿಯಸ್ಯಮಹಿಮಾರ್ಣವವಿಪ್ರುಷಸ್ತೇ ॥

ಎಂಬ ಶ್ಲೋಕದಲ್ಲಿ ಶ್ರೀಮನ್ನಾರಾಯಣನೇ ಪರಬ್ರಹ್ಮನೆಂದೂ ಬ್ರಹ್ಮರುದ್ರೇಂದ್ರಾದಿ ಗಳೆಲ್ಲರೂ ಅವನ ಮಹಿಮೆಯೆಂಬ ಮಹಾ ಸಮುದ್ರದಲ್ಲಿ ಒಂದು ಬಿಂದುವಿಗೆ ಸಮಾನರು ಎಂದೂ.

ಕೂರತ್ತಾಳ್ವಾರ್ರು ತಮ್ಮ ವೈಕುಂಠಸ್ತವದಲ್ಲಿ—

ಯನ್ಮೂಲಕಾರಣ ಮಬುದ್ಧ್ಯತಸೃಷ್ಟಿವಾಕ್ಯೈ ।
ಬ್ರಹ್ಮೇತಿವಾಸದಿತಿ ವಾತ್ಮಗಿರಾಥವಾತತ್ ।
ನಾರಾಯಣಸ್ತ್ವಿತಿಮಹೋಪನಿಷತ್ಪ್ರವೀತಿ ।
ಸೌಬಾಲಿಕೀಪ್ರಭೃತಯೋಽಪ್ಯನುಜಗ್ಮುರೇನಾಂ ॥೨೬॥

ಎಂದರೆ, ಸೃಷ್ಟಿಪ್ರಕರಣಗಳಲ್ಲಿರುವ ಕಾರಣ ವಾಕ್ಯಗಳಿಂದ 'ಸತ್' ಎಂದೂ 'ಬ್ರಹ್ಮ' ಎಂದೂ, 'ಆತ್ಮಾ' ಎಂದೂ ಯಾವ ವಸ್ತುವು ಮೂಲಕಾರಣವಾಗಿ ಹೇಳಲ್ಪಡುವುದೋ ಆ ವ್ಯಕ್ತಿಯು ನಾರಾಯಣನೇ ಎಂದು ಮಹೋಪನಿಷತ್ತೂ ಸುಬಾಲೋಪನಿಷತ್ತೂ ಹೇಳುವುವು ಎಂದೂ.

ಜ್ಯೋತಿಃಪರಂಪರಮತತ್ತ್ವಮಥೋಪರಾತ್ಮಾ ।
ಬ್ರಹ್ಮೇತಿಚಶ್ರುತಿಷುಯತ್ಪರ ವಸ್ತ್ವಧೀತಂ ।
ನಾರಾಯಣಸ್ತದಿತಿ ತದ್ವಿಶಿನಷ್ಟಿ ಕಾಚಿ ।
ದ್ವಿಷ್ಣೋಃಪದಂ ಪರಮಮಿತ್ಯಪರಾಗೃಣಾತಿ ॥ (೨೭)

ಎಂದರೆ, ವೇದಗಳಲ್ಲೇ ಯಾವ ಪರವಸ್ತುವು 'ಪರಂಜ್ಯೋತಿ' ಯೆಂದೂ 'ಪರಮ ತತ್ತ್ವ' ವೆಂದೂ 'ಪರಮಾತ್ಮಾ' ವೆಂದೂ ಹೇಳಲ್ಪಡುವುದೋ ಆ ವಸ್ತುವೇ

'ನಾರಾಯಣ' ನೆಂದು ಒಂದು ಶ್ರುತಿಯು ವಿವರಿಸುವುದು. ಮತ್ತೊಂದು ಶ್ರುತಿಯು ಆ ವಸ್ತುವನ್ನೇ 'ವಿಷ್ಣೋಃಪರಮಂಪದಂ' ಎಂದು ಹೇಳುವುದು, ಎಂದೂ ಹೀಗೆ ದಿವ್ಯಜ್ಞಾನಸಂಪನ್ನರಾದ ನಮ್ಮ ಪೂರ್ವಿಕರಾದ ಆಳ್ವಾರ್ರುಗಳೂ, ಆಚಾರ್ಯರುಗಳೂ ಶ್ರೀಮನ್ನಾರಾಯಣನೇ ಪರತತ್ತ್ವವು ಬ್ರಹ್ಮರುದ್ರಾದಿಗಳಲ್ಲವೆಂಬುವುದನ್ನು ಏಕಕಂಠರಾಗಿ ಅನೇಕ ಕಡೆಗಳಲ್ಲಿ ಹೇಳಿರುವರು

ಶ್ರೀಮನ್ನಾರಾಯಣನೇ ಜಗತ್ಕಾರಣನೂ, ಉಪಾಸ್ಯನೂ ಮತ್ತು ಸಕಲ ಕರ್ಮಫಲಪ್ರದನೂ ಆಗಿರುವನು ಪರತತ್ತ್ವ ಸ್ವರೂಪನಾದ ಶ್ರೀಮನ್ನಾರಾಯಣನೇ ಜಗತ್ಕಾರಣನೂ, ಸರ್ವಜೀವರುಗಳಿಗೂ ಉಪಾಸ್ಯನೂ, ಮತ್ತು ಮೋಕ್ಷಪ್ರದನೂ ಆಗಿರುವನು ಈ ವಿಚಾರಗಳನ್ನೆಲ್ಲಾ ಮೇಲೆಯೇ ಅಲ್ಲಲ್ಲಿ ಹೇಳಿರುವುದು "ಯತೋವಾಇಮಾನಿ ಭೂತಾನಿಜಾಯನ್ತೆ" ಇತ್ಯಾದಿ ಶ್ರುತಿ ವಾಕ್ಯರೀತ್ಯಾ ಪರಬ್ರಹ್ಮನೇ ಜಗತ್ತಿಗೆ ಸೃಷ್ಟಿಸ್ಥಿತಿ ಮತ್ತು ಪ್ರಳಯಕಾರಣನೆಂದು ಹಿಂದೆಯೇ ಹೇಳಿದೆ. ಅವನೇ ಉಪಾಸ್ಯನು ಎಂದೂ ಅದೇ ಶ್ರುತಿವಾಕ್ಯದಿಂದ ಸ್ಥಿರಪಡುವುದು ಸಮಸ್ತ ಕರ್ಮಗಳಿಗೂ ಆ ಶ್ರೀಮನ್ನಾರಾಯಣನೇ ನೇರವಾಗಿಯಾಗಲಿ ನಾವು ಆರಾದಿಸುವ ಆಯಾಯ ದೇವತೆಗಳ ಮೂಲಕವಾಗಿಯಾಗಲಿ, ಫಲವನ್ನು ಅನುಗ್ರಹಿಸುವನು ಎಂಬ ವಿಷಯವೂ ಹಿಂದೆಯೇ ಹೇಳಿರುವುದು ಶ್ರೀಮನ್ನಾರಾಯಣನೇ ಸಕಲ ಚೇತನರಿಗೂ ಧರ್ಮಾರ್ಥ ಕಾಮಮೋಕ್ಷರೂಪವಾದ ಅವರವರ ಇಷ್ಟಾರ್ಥಗಳನ್ನು ಅನುಗ್ರಹಿಸುವನು. ಆಬ್ರಹ್ಮಕೀಟಪರ್ಯನ್ತವಾದ ಸಮಸ್ತ ಜೀವರಲ್ಲಿಯೂ ಅಂತರ್ಯಾಮಿಯಾಗಿದ್ದು ಅವರವರ ಯೋಗಕ್ಷೇಮಗಳನ್ನು 'ಮಾತೃವತ್ಪರಿರಕ್ಷನ್ತಂ' ಎಂಬ ವಾಕ್ಯರೀತ್ಯಾ ತಾನೇ ನಿರ್ವಹಿಸುತ್ತಿರುವನು ಶ್ರೀಮನ್ನಾರಾಯಣನೇ ಸರ್ವಕರ್ಮ ಸಮಾರಾಧ್ಯನು ಮತ್ತು ಸರ್ವಕರ್ಮ ಫಲಪ್ರದನು ಎಂಬ ವಿಷಯವು ತೈತ್ತಿರಿಯೋಪನಿಷತ್ತಿನಲ್ಲಿ—

"ಇಷ್ಟಾಪೂರ್ತಂ ಬಹುಧಾಜಾತಂಜಾಯಮಾನಂ। ವಿಶ್ವಂ ಬಿಭರ್ತಿಭುವನಸ್ಯ ನಾಭಿಃ" ಎಂಬ ಮಂತ್ರದಿಂದಲೂ

"ತಂದೇವಾ ಋಷಯಶ್ಚೈವ । ನಾನಾತನುಸಮಾಶ್ರಿತಾಃ। ಭಕ್ತ್ಯಾಸಂಪೂಜಯಂತ್ಯೇನಂಗತಿಂತ್ವೇಷಾಂ ದಧಾತಿಸಃ॥

"ಲಭತೇಚತತಃಕಾಮಾ ಮಯ್ಯೈವವಿಹಿತಾಹಿತಾ" (ಭ ಗೀ ೯-೨೨)

"ಸರ್ವಕರ್ಮಫಲಪ್ರದೋಹಿವಿಷ್ಣುಃ" (ವಿ ಪು.)

ಇತ್ಯಾದಿ ಶ್ರುತಿಸ್ಮೃತ್ಯಾದಿ ವಾಕ್ಯಗಳಿಂದ ಸಿದ್ಧಿಸುವುದು.

"ಸರ್ವಧರ್ಮಾನ್ ಪರಿತ್ಯಜ್ಯ | ಮಾಮೇಕಂ ಶರಣಂವ್ರಜ |
ಅಹಂತ್ವಾಸರ್ವಪಾಪೇಭ್ಯೋ | ಮೋಕ್ಷಯಿಷ್ಯಾಮಿಮಾಶುಚಃ ||

ಎಂಬ ಗೀತಾ ವಾಕ್ಯಪ್ರಕಾರ ಆ ಶ್ರೀಮನ್ನಾರಾಯಣನೇ ಮೋಕ್ಷಪ್ರದನು. ಬೇರೆ ಯಾವ ದೇವತೆಗಳಿಗೂ ಮೋಕ್ಷಫಲಪ್ರದತ್ವವಿಲ್ಲವೆಂಬ ವಿಷಯದಲ್ಲಿ—

"ಬ್ರಹ್ಮಾಣಂ ಶಿತಿಕಂಠಂಚ | ಯಾಶ್ಚಾನ್ಯಾದೇವತಾಸ್ಮೃತಾಃ |
ಪ್ರತಿಬುದ್ಧಾನಸೇವಂತೇ | ತಸ್ಮಾತ್ಪರಿಮಿತಂಫಲಂ || (ಭಾರ ಮೋಕ್ಷಧರ್ಮೆ)

ಎಂದರೆ ಬುದ್ಧಿವಂತರಾದ ಜ್ಞಾನಿಗಳು ಚತುರ್ಮುಖ ಬ್ರಹ್ಮ, ರುದ್ರ ಮುಂತಾದ ದೇವತೆಗಳನ್ನು ಉಪಾಸಿಸುವುದಿಲ್ಲ. ಯಾತಕ್ಕೆಂದರೆ ಅದರಿಂದ ಅವರಿಗೆ ಅಲ್ಪವಾದ ಸ್ವರ್ಗಾದಿ ಸುಖಗಳು ದೊರಕುವುವೇವಿನಾ ಶಾಶ್ವತವಾದ ಮೋಕ್ಷವು ದೊರಕುವುದಿಲ್ಲ; ಎಂಬ ಶ್ಲೋಕವನ್ನು ನಾವೆಲ್ಲರೂ ಚೆನ್ನಾಗಿ ಮನಸ್ಸಿನಲ್ಲಿಡಬೇಕು ಶ್ರೀಮನ್ನಾರಾಯಣನನ್ನೇ ಅನನ್ಯವಾದ ಭಕ್ತಿಯಿಂದ ಭಜಿಸಿ ಅವನಲ್ಲಿ ಶರಣಾಗತಿಯನ್ನು ಮಾಡುವುದೇ ನಮಗೆ ಶಾಶ್ವತವಾದ ಮುಕ್ತಿಗೆ ಕಾರಣವಾಗುವುದು

———o———